ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ
KARNATAKA SKILL DEVELOPMENT CORPORATION

SANKALP
Ministry of Skill Development & Entrepreneurship

# ಅರ್ಹತಾ ಪ್ಯಾಕ್ – ಮಾಧ್ಯಮ ಮತ್ತು ಮನೋರಂಜನೆ ಉದ್ಯಮದ ಔದ್ಯೋಗಿಕ ಮಾನದಂಡಗಳು

# QUALIFICATIONS PACK - OCCUPATIONAL STANDARDS FOR MEDIA AND ENTERTAINMENT INDUSTRY

**ಪರಿಚಯ**

**ಅರ್ಹತಾ ಪ್ಯಾಕ್ – ಸಂಕಲನಕಾರ**

**ಪರಿವಿಡಿ**


1. ಪರಿಚಯ ಮತ್ತು ಸಂಪರ್ಕಗಳು ................................... ಪುಟ 1
2. ಅರ್ಹತೆಗಳ ಪ್ಯಾಕ್ ................................................ ಪುಟ 2
3. ಮುಖ್ಯ ಪದಗಳ ಶಬ್ದಾವಳಿ ......................................... ಪುಟ 3
4. ಎನ್‌ಓಎಸ್ ಘಟಕಗಳು ............................................. ಪುಟ 5
5. ಓಪಿ ಮತ್ತು ಎನ್‌ಓಎಸ್‌ಗಾಗಿ ನಾಮಕರಣ ................. ಪುಟ 24
6. ಪ್ರಶಿಕ್ಷಣಾರ್ಥಿಗಳ ಮೌಲ್ಯಮಾಪನದ ಮಾನದಂಡಗಳು .... ಪುಟ 26


| | | |
|---|---|---|
| ವಲಯ | : | ಮಾಧ್ಯಮ ಮತ್ತು ಮನೋರಂಜನೆ |
| ಉಪವಲಯ | : | ಸಿನಿಮಾ, ಟೆಲಿವಿಷನ್, ಅನಿಮೇಷನ್, ಜಾಹೀರಾತು |
| ಉದ್ಯೋಗ | : | ಸಂಪಾದಕರು |
| ಉಲ್ಲೇಖ | : | MES/Q1401 |
| ಜೊತೆಗೆ | : | NCO-2015/2541.0300 |

**ಮಾಧ್ಯಮ ಮತ್ತು ಮನರಂಜನಾ ಉದ್ಯಮದಲ್ಲಿ ಸಂಪಾದಕರನ್ನು ವೀಡಿಯೊ ಸಂಕಲಕಾರ / ಧ್ವನಿ ಸಂಕಲನಕಾರ ಎಂದೂ ಕರೆಯಲಾಗುತ್ತದೆ**

**ಕೆಲಸ ಸಂಕ್ಷಿಪ್ತ ವಿವರಣೆ:** ಉತ್ಪಾದಿಸಿದ ಕಚ್ಚಾ ಮಾಹಿತಿಗಳನ್ನು (ಉದಾಹರಣೆಗೆ ವೀಡಿಯೋಗಳು, ಸಂಗೀತ, ಧ್ವನಿ ಮತ್ತು ಚಿತ್ರಗಳು) ಕತ್ತರಿಸುವುದು/ಮರು ಕತ್ತ–ರಿಸುವುದು, ಜೋಡಿಸುವುದು ಮತ್ತು ಒಟ್ಟಿಗೆ ವಿಲೀನಗೊಳಿಸಿ ಪ್ರಸಾರಕ್ಕೆ ಸೂಕ್ತವಾದ ರೀತಿಯಲ್ಲಿ ಅಂತಿಮ ತಯಾರಿ ಮಾಡಿಕೊಡುವ ವಿಧಾನವನ್ನು ಈ ಕೆಲಸದಲ್ಲಿರುವವರು ಅರ್ಥ ಮಾಡಿಕೊಳ್ಳಬೇಕು.

**ವೈಯಕ್ತಿಕ ಗುಣಲಕ್ಷಣಗಳು:** ಈ ಉದ್ಯೋಗವನ್ನು ಮಾಡುವು ವ್ಯಕ್ತಿಯು ಇವುಗಳನ್ನು ಚೆನ್ನಾಗಿ ತಿಳಿದಿರಬೇಕಾಗುತ್ತದೆ. ವಿಂಗಡಣೆ, ಜೋಡಣೆ, ಸಮಾನಾಂತರ ಸಂಪಾದನೆ, ಸೀಳುವಿಕೆ ಮತ್ತು ಸೇರಿಸುವಿಕೆ ಹಾಗೂ ಚಿತ್ರ/ಧ್ವನಿಯನ್ನು ವಿಲೀನಗೊಳಿಸುವುದು. ವ್ಯಕ್ತಿಗಳು ಅಂತಿಮ ಉತ್ಪನ್ನವನ್ನು ಸಿದ್ಧಪಡಿಸಲು ಎವಿಡ್, ಫೈನಲ್ ಕಟ್ ಪ್ರೊ, ಅಡೋಬ್ ಪ್ರೀಮಿಯರ್ ಮತ್ತು ಸೌಂಡ್ ಕ್ಲೀನಿಂಗ್ ತರಹದ ಸಾಫ್ಟ್‌ವೇರ್‌ಗಳನ್ನು ಬಳಸಲು ಶಕ್ತರಾಗಬೇಕು.

**ಔದ್ಯೋಗಿಕ ಮಾನದಂಡ (OS) ಎಂದರೆ ಏನು?**

- ಪ್ರತಿಯೊಬ್ಬ ವ್ಯಕ್ತಿಯೂ ನಿರ್ದಿಷ್ಟ ಬಗೆಯ ಕಾರ್ಯಭಾರವನ್ನು ಕೈಗೊಳ್ಳುವ ಮುನ್ನ ಯಾವ ವಿಷಯವನ್ನು ತಿಳಿದು, ಅರ್ಥ ಮಾಡಿಕೊಂಡು, ಅನುಸರಿಸಬೇಕಾಗಿದೆಯೋ ಅದನ್ನು ಔದ್ಯೋಗಿಕ ಮಾನದಂಡಗಳು ಬಣ್ಣಿಸುತ್ತದೆ.
- ಔದ್ಯೋಗಿಕ ಮಾನದಂಡಗಳು, ವ್ಯಕ್ತಿಗಳು ಕೆಲಸದ ಸ್ಥಳದಲ್ಲಿ ಕಾರ್ಯ ನಿರ್ವಹಿಸುವಾಗ ಸಾಧಿಸಬೇಕಾದ ಕಾರ್ಯಕ್ಷಮತೆಯ ಜೊತೆಯಲ್ಲಿ ಹೊಂದಿರಬೇಕಾದ ಜ್ಞಾನ ಮತ್ತು ತಿಳುವಳಿಕೆಗಳನ್ನು ನೀಡುತ್ತವೆ.

ಕೆಲಸದ ವಿವರಗಳು

| ಅರ್ಹತೆ ಪ್ಯಾಕ್ ಸಂಕೇತ | MES/Q1401 | | |
|---|---|---|---|
| ಕೆಲಸ ಕಾರ್ಯಭಾರ | ಸಂಕಲನಕಾರ<br>(ಈ ಉದ್ಯೋಗವು ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಸನ್ನಿವೇಶಗಳಿಗೆ ಹೊಂದುತ್ತದೆ) | | |
| ಮನ್ನಣೆ | ಇನ್ನೂ ತೀರ್ಮಾನಿಸಬೇಕಿದೆ | ಆವೃತ್ತಿ ಸಂಖ್ಯೆ: | 1.0 |
| ವಲಯ | ಮಾಧ್ಯಮ ಮತ್ತು ಮನರಂಜನೆ | ಕರಡು ಪ್ರತಿ ದಿನಾಂಕ: | 16/11/2014 |
| ಉಪ ವಲಯ | ಸಿನಿಮಾ, ಟೆಲಿವಿಷನ್, ಅನಿಮೇಶನ್ ಮತ್ತು ಜಾಹಿರಾತು | ಅಂತಿಮ ಪರಿಷ್ಕರಣೆ ದಿನಾಂಕ: | 20/03/2018 |
| ವೃತ್ತಿ | ಉತ್ಪಾದನಾ ನಂತರದ ಚಟುವಟಿಕೆ | ಮುಂದಿನ ಪರಿಶೀಲನೆ ದಿನಾಂಕ: | 20/06/2021 |
| NSQC ಅನುಮತಿ ದೊರೆತ ದಿನ: | 22/08/2019 | | |

| ಕಾರ್ಯಭಾರದ ಹೆಸರು | ಸಂಕಲನಕಾರ |
|---|---|
| ಕಾರ್ಯಭಾರ ವಿವರಣೆ | ಉತ್ಪಾದಿತ ಕಚ್ಚಾ ಮಾಹಿತಿಗಳನ್ನು ಕತ್ತರಿಸಿ, ಕ್ರಮಗತಿಯಲ್ಲಿ ಜೋಡಿಸಿ ಮತ್ತು ವಿಲೀನಗೊಳಿಸಿ ತಯಾರಿ ಮಾಡಿಕೊಡುವುದು |
| NSQF ಮಟ್ಟ: | 4 |
| ಕನಿಷ್ಟ ಅರ್ಹತೆ:<br>ಗರಿಷ್ಟ ಅರ್ಹತೆ: | ಪದವಿ<br>ಲಲಿತ ಕಲೆ/ ಸಿನಿಮಾ ವಿಭಾಗದಲ್ಲಿ ಸ್ನಾತಕೋತ್ತರ ಪದವಿ |
| ಪೂರ್ವಾಗತ್ಯ ಪರವಾನಗಿ ಅಥವಾ ತರಬೇತಿ | ಎವಿಡ್, ಫೈನಲ್ ಕಟ್ ಪ್ರೊ, ಸೌಂಡ್ ಕ್ಲೀನಿಂಗ್ ರೀತಿಯ ನಾನ್ ಲೀನಿಯರ್ ಎಡಿಟಿಂಗ್ ಸಾಫ್ಟ್‌ವೇರ್<br>ಸಿನಿಮಾ ಎಡಿಟಿಂಗ್‌ನಲ್ಲಿ ಪದವಿ / ತತ್ಸಮಾನ |
| ಕೆಲಸಕ್ಕೆ ಸೇರಲು ಕನಿಷ್ಟ ವಯೋಮಿತಿ | 18 ವರ್ಷಗಳು |
| ಅನುಭವ | 3–5 ವರ್ಷಗಳ ಕೆಲಸದ ಅನುಭವ<br>1–3 ವರ್ಷಗಳು, ಕಿರಿಯ ಎಡಿಟರ್‌ಗಾಗಿ |
| ಅನ್ವಯಿಸುವ ರಾಷ್ಟ್ರೀಯ ಔದ್ಯೋಗಿಕ ಮಾನದಂಡಗಳು (NOS) | ಕಡ್ಡಾಯವಾದವು:<br>1. MES/ N 1401 (ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಕೆಲಸದ ಹರಿವನ್ನು ಯೋಜಿಸುವುದು)<br>2. MES/ N 1402 (ಸಾಮಗ್ರಿಗಳು ಮತ್ತು ಉಪಕರಣಗಳ ನಿರ್ವಹಣೆ)<br>3. MES/ N 1403 (ಉತ್ಪನ್ನ(ಚಲನಚಿತ್ರ)ಗಳ ಸಂಕಲನ)<br>4. MES/ N 1404 (ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು)<br>ಐಚ್ಛಿಕವಾದವು: ಯಾವುದೂ ಇಲ್ಲ |
| ಕಾರ್ಯಕ್ಷಮತೆಯ ಮಾನದಂಡ | ಸಂಬಂಧಿದ OS ಔದ್ಯೋಗಿಕ ಮಾನದಂಡಗಳ ಘಟಕಗಳಲ್ಲಿ ವಿವರಿಸಿದಂತೆ |

ವ್ಯಾಖ್ಯಾನಗಳು

| ಮುಖ್ಯಪದ/ ಪಾರಿಭಾಷಿಕಗಳು | ವಿವರಣೆ |
| --- | --- |
| ಬಜೆಟ್ (ಮುಂಗಡ ಆಯವ್ಯಯ ಪತ್ರ) | ಬೇರೆ ಬೇರೆ ವೆಚ್ಚಗಳ ವಿವರಗಳನ್ನು ಹೊಂದಿರುವ, ಒಟ್ಟೂ ಉತ್ಪನ್ನದ ಸಂಪೂರ್ಣ ತಯಾರಿಕೆಗೆ ತಗಲುವ ಅಂದಾಜು ವೆಚ್ಚ |
| ಕಲರ್ ಗ್ರೇಡಿಂಗ್ (ಬಣ್ಣ ಹೊಂದಿಕೆ) | ಉತ್ಪನ್ನದ/ ಚಲನಚಿತ್ರಗಳ ಬಣ್ಣವನ್ನು ಮಾರ್ಪಡಿಸುವ/ ಮೇಲ್ಮಟ್ಟಕ್ಕೇರಿಸುವ ಪ್ರಕ್ರಿಯೆಗೆ ಬಣ್ಣ ಹೊಂದಿಕೆ ಎನ್ನುತ್ತಾರೆ. |
| ಕಂಪೋಸ್ಟಿಂಗ್ (ಪದರಗಳ ಬೆರೆಸುವಿಕೆ) | ಬೇರೆ ಬೇರೆ ಪದರಗಳಲ್ಲಿರುವ ದೃಶ್ಯ/ ಚಿತ್ರಗಳನ್ನು ಬೆರೆಸಿ ಒಂದೇ ಚೌಕಟ್ಟಿನ ಒಳಕ್ಕೆ ತರುವುದು |
| ಗಣಕಯಂತ್ರದಿಂದ ಮಾಡುವ ಪರಿಣಾಮಗಳು | ಚಲನಚಿತ್ರಗಳಲ್ಲಿ ಭ್ರಮಾತ್ಮಕ ಚಿತ್ರಗಳನ್ನು ಗಣಕಯಂತ್ರದ ನೆರವಿನಿಂದ ರೂಪಿಸುವುದು |
| ಕ್ರಿಯೇಟಿವ್ ಬ್ರೀಫ್ (ಸೃಜನಾತ್ಮಕ ಟಿಪ್ಪಣಿ) | ಒಂದು ಚಲನಚಿತ್ರ/ ಯೋಜನೆಯ ದೃಷ್ಟಿಕೋನ, ಯೋಜನೆಯ ಗುರಿಗಳು, ಉದ್ದೇಶಿತ ನೋಡುಗರು, ಕಾಲಾವಧಿ, ವೇಳಾಪಟ್ಟಿ, ಬಂಡವಾಳ, ಮೈಲಿಗಲ್ಲುಗಳು, ಹೂಡಿಕೆದಾರರು ಸೇರಿದಂತೆ ಉತ್ಪಾದನೆಯ/ ಚಲನಚಿತ್ರದ/ ಯೋಜನೆಯ ಎಲ್ಲದರ ಬಗ್ಗೆ ಮಾರ್ಗದರ್ಶನ ನೀಡಬಲ್ಲಂತಹ ಪ್ರಶ್ನೆಗಳನ್ನು ಒಳಗೊಂಡಿರುವ ಸಂಕ್ಷಿಪ್ತ ದಾಖಲೆಯನ್ನು ಸೃಜನಾತ್ಮಕ ಟಿಪ್ಪಣಿ ಎನ್ನುತ್ತಾರೆ. |
| ಡಿಜಿಟಲ್ ಇಂಟರ್‌ಮೀಡಿಯೇಟ್ | ಚಲನಚಿತ್ರದ/ ಉತ್ಪನ್ನದ ಡಿಜಿಟಲ್ ಆವೃತ್ತಿಯ ಬಣ್ಣಗಳ ಗುಣಲಕ್ಷಣಗಳನ್ನು ಬದಲಿಸುವ ಪ್ರಕ್ರಿಯೆಗೆ ಡಿಜಿಟಲ್ ಇಂಟರ್‌ಮೀಡಿಯೇಟ್ ಎನ್ನುತ್ತಾರೆ. |
| ಎಡಿಟಿಂಗ್ (ಸಂಕಲನ) | ಚಲನಚಿತ್ರ ಹಾಗೂ ಧ್ವನಿ ತುಣುಕುಗಳನ್ನು ವ್ಯವಸ್ಥಿತವಾಗಿ ಜೋಡಿಸುವ, ಕತ್ತರಿಸುವ ಹಾಗೂ ಒಗ್ಗೂಡಿಸುವ ಮೂಲಕ ನಿಖರವಾದ, ಸಾರಯುಕ್ತವಾದ, ಅರ್ಥಪೂರ್ಣವಾದ ಹಾಗೂ ನಿರೀಕ್ಷಿತ ಸಂವಹನವನ್ನು ಮಾಡಬಲ್ಲಂತಹ ಸಿದ್ಧಉತ್ಪನ್ನ/ ಚಲನಚಿತ್ರವನ್ನು ರೂಪಿಸುವ ಪ್ರಕ್ರಿಯೆ ಸಂಕಲನ |
| ಫೂಟೇಜ್ (ಚಲನಚಿತ್ರ ತುಣುಕು) | ಮುದ್ರಿತವಾದ ಯಾವುದೇ ಮಾಧ್ಯಮ |
| ಇಂಜೆಸ್ಟ್ (ತಂದು ಸೇರಿಸುವುದು) | ಸಂಬಂಧಪಟ್ಟ ಧ್ವನಿ/ ದೃಶ್ಯ ತುಣುಕುಗಳನ್ನು ಮತ್ತು/ ಅಥವಾ ಚಿತ್ರಗಳನ್ನು ಗಣಕಯಂತ್ರದ ಹಾರ್ಡ್‌ಡಿಸ್ಕ್‌ಗೆ ಆಮದು ಮಾಡಿಕೊಂಡು ಸಂಕಲನ ತಂತ್ರಾಂಶಗಳಿಗೆ ಅಪ್‌ಲೋಡ್ ಮಾಡುವುದು. |
| ಮಾಡೆಲಿಂಗ್ (ಆಕೃತಿ ನಿರ್ಮಾಣ) | ಅನಿಮೇಶನ್ ಮಾಡುವ ಸಲುವಾಗಿ, ಮೂರು ಆಯಾಮದ ಆಕೃತಿಗಳನ್ನು ವಿಶಿಷ್ಟವಾದ ತಂತ್ರಾಂಶಗಳನ್ನು ಬಳಸಿ, ಸೃಷ್ಟಿಸುವುದಕ್ಕೆ ಮಾಡೆಲಿಂಗ್ ಎನ್ನುತ್ತಾರೆ. |
| ರೆಂಡರಿಂಗ್ | ಮೂರು ಆಯಾಮದ ಚಿತ್ರಗಳನ್ನು, 3ಡಿ ಪರಿಣಾಮ ನೀಡುವ ಎರಡು ಆಯಾಮದ ಚಿತ್ರಗಳಾಗಿ ಮಾರ್ಪಡಿಸುವಿಕೆ |
| ರೋಟೋಸ್ಕೋಪಿ | ರೋಟೋಸ್ಕೋಪಿ ಎನ್ನುವುದು ಚಲನಚಿತ್ರದ ತುಣುಕನ್ನು ಬಿಡಿ ಬಿಡಿ ಚೌಕಟ್ಟು/ ಪಟಗಳಾಗಿ ಮಾಡಿಕೊಂಡು ಅದರಲ್ಲಿನ ಒಂದೊಂದೇ ಆಕಾರಗಳನ್ನು ಗುರುತಿಸಿ ಅವುಗಳಿಗೆ ಅಗತ್ಯವಾದ ಮಾರ್ಪಾಟು ಮಾಡುವುದು. |
| ಸ್ಕ್ರೀನ್ ಕನ್ವರ್ಷನ್ | ಎರಡು ಆಯಾಮದಿಂದ ಮೂರು ಆಯಾಮಕ್ಕೆ ಬದಲಿಸುವ ಪ್ರಕ್ರಿಯೆ (ತೆರೆ ಬಗೆ ಬದಲಿಕೆ) |
| ಧ್ವನಿ ಸಂಕಲನ | ಧ್ವನಿ ಕಡತಗಳನ್ನು ಚಿತ್ರ ಸಹಿತ/ ರಹಿತ ಸಂಕಲಿಸುವುದು |
| ದೃಶ್ಯ ವಿಶೇಷ ಪರಿಣಾಮ | ವಿಷುಯಲ್ ಎಫೆಕ್ಟ್ ಎನ್ನುವುದು ನೈಜವಾಗಿ ಚಿತ್ರಿತವಾದ ಚಲನಚಿತ್ರ ತುಣುಕುಗಳ ಜೊತೆಯಲ್ಲಿ ಗಣಕಯಂತ್ರದಲ್ಲಿ ರೂಪಿಸಲಾದ ಪರಿಣಾಮಗಳನ್ನು ಹೊಂದಿಸುವುದು. |
| ಟೈಂ ಲೈನ್ | ಇದು ಸಂಕಲನ ತಂತ್ರಾಂಶದ ಮೂಲಘಟಕವಾಗಿದ್ದು ಬೇಕಾದ ಜಾಗದಲ್ಲಿ ಚಲನಚಿತ್ರ ತುಣುಕುಗಳನ್ನು ನೋಡಲು/ ಕತ್ತರಿಸಲು ಸಹಾಯಕವಾಗಿದೆ. |
| ವಲಯ | ವಲಯವೆನ್ನುವುದು ಒಂದೇ ರೀತಿಯ ಉದ್ದಿಮೆ ಮತ್ತು ಆಸಕ್ತಿಗಳನ್ನು ಹೊಂದಿರುವ ಹಲವಾರು ಉದ್ದಿಮೆಗಳ ಕಲಸುಮೇಲೋಗರದ ಸಮೂಹವಾಗಿದೆ. ಇದನ್ನು ಸಮಾನ ಆಸಕ್ತಿ ಹಾಗೂ ಗುಣಲಕ್ಷಣಗಳನ್ನು ಹೊಂದಿರುವ ಆರ್ಥಿಕತೆಯ ದೂರದ ಉಪವಿಭಾಗವೆಂದು ಪರಿಗಣಿಸಬಹುದಾಗಿದೆ. |
| ಉಪ ವಲಯ | ಇದು ಸಮಾನ ಆಸಕ್ತಿ ಹಾಗೂ ಗುಣಲಕ್ಷಣದ ಆಧಾರದ ಮೇರೆಗೆ ಮಾಡಲಾಗಿರುವ ವಲಯದ ಸಣ್ಣ ಘಟಕವಾಗಿದೆ. |
| ಲಂಬ | ಉಪವಲಯಗಳ ಒಳಗೆ ಇರಬಹುದಾದ ವಿಭಿನ್ನ ವಿಶಿಷ್ಟ ಕ್ಷೇತ್ರಗಳ ಅಥವಾ ಕೈಗಾರಿಕೆಯು ಸೇವೆ ಸಲ್ಲಿಸುತ್ತಿರುವ ಗ್ರಾಹಕರನ್ನು ಪ್ರತಿನಿಧಿಸಲು ಲಂಬ ಇರಬಹುದಾಗಿದೆ. |
| ಉದ್ಯೋಗ | ಒಂದೇ ಬಗೆಯ ಕಾರ್ಯಭಾರಗಳ ಸಮೂಹವನ್ನು ಅದೇ ಬಗೆಯ ಕಾರ್ಯಭಾರಗಳನ್ನು ನಡೆಸುವ ಕೈಗಾರಿಕೆಯಲ್ಲಿನ ಅವಕಾಶಕ್ಕೆ ಉದ್ಯೋಗವೆಂದು ಕ್ಕರೆಯಲಾಗಿದೆ. |
| ಕಾರ್ಯಚಟುವಟಿಕೆ | ಕಾರ್ಯಚಟುವಟಿಕೆಯು, ವ್ಯಕ್ತಿ ಅಥವಾ ತಂಡಗಳು ವಲಯದ, ಉದ್ಯೋಗದ ಅಥವಾ ಕಾರ್ಯಕ್ಷೇತ್ರದ ಮುಖ್ಯ ಉದ್ದೇಶಗಳನ್ನು ಈಡೇರಿಸಲು ನಡೆಸುವ ಚಟುವಟಿಕೆಯಾಗಿದೆ. ಕಾರ್ಯಚಟುವಟಿಕೆಯನ್ನು, ಚಟುವಟಿಕೆಯ ವಿಶ್ಲೇಷಣೆಗಳ ಮೂಲಕ ಗುರುತಿಸಲಾಗುತ್ತದೆ ಮತ್ತು ಇದು ರಾಷ್ಟ್ರೀಯ ಔದ್ಯೋಗಿಕ ಮಾನದಂಡಗಳ ಆಧಾರವನ್ನು ರೂಪಿಸುತ್ತದೆ. |
| ಉಪ ಕಾರ್ಯಚಟುವಟಿಕೆ | ಕಾರ್ಯಚಟುವಟಿಕೆಯ ಉದ್ದೇಶಗಳನ್ನು ಈಡೇರಿಸಲು ಅಗತ್ಯವಿರುವ ಸಣ್ಣ ಸಣ್ಣ ಚಟುವಟಿಕೆಗಳನ್ನು ಉಪ ಕಾರ್ಯಚಟುವಟಿಕೆ ಎನ್ನುತ್ತಾರೆ. |

| | |
|---|---|
| ಕೆಲಸದ ಕಾರ್ಯಭಾರ | ಇದು ವಿಶೇಷವಾದ ಕಾರ್ಯಚಟುವಟಿಕೆಗಳ ಸಮೂಹವಾಗಿದ್ದು ಒಂದು ಸಂಸ್ಥೆಯಲ್ಲಿ ವಿಶೇಷವಾದ ಉದ್ಯೋಗದ ಅವಕಾಶವನ್ನು ಹುಟ್ಟುಹಾಕುತ್ತದೆ. |
| ಔದ್ಯೋಗಿಕ ಮಾನದಂಡ | ಕೆಲಸದ ಸ್ಥಳದಲ್ಲಿ ವ್ಯಕ್ತಿಯು ಜ್ಞಾನ ಮತ್ತು ತಿಳುವಳಿಕೆಯನ್ನು ಪಡೆಯುವುದರ ಜೊತೆಗೆ ಅವಶ್ಯವಾಗಿ ಸಾಧಿಸಬೇಕಾದ ನಿಗದಿತ ಗುಣಮಟ್ಟವನ್ನು ಔದ್ಯೋಗಿಕ ಮಾನದಂಡವು ಸೂಚಿಸುತ್ತದೆ. ಇದು ಭಾರತೀಯ ಮತ್ತು ಜಾಗತಿಕ ಮಟ್ಟದ ಸಂದರ್ಭಗಳಲ್ಲೂ ಅನ್ವಯವಾಗುತ್ತದೆ. |
| ಕಾರ್ಯಕ್ಷಮತೆ ಮಾನದಂಡ | ಯಾವುದೇ ಕೆಲಸವನ್ನು ಮಾಡಲು ಬೇಕಾಗಿರುವ ಕಾರ್ಯಕ್ಷಮತೆಯ ಮಟ್ಟವನ್ನು ತಿಳಿಸಿಕೊಡುವ ಒಟ್ಟಾರೆ ಹೇಳಿಕೆಗಳನ್ನು ಕಾರ್ಯಕ್ಷಮತೆಯ ಮಾನದಂಡ ಎನ್ನುತ್ತಾರೆ. |
| ರಾಷ್ಟ್ರೀಯ ಔದ್ಯೋಗಿಕ ಮಾನದಂಡ (ರಾ.ಔ.ಮಾ) | ಭಾರತದ ಸನ್ನಿವೇಶಗಳಿಗೆ ತಕ್ಕಂತೆ ವಿಶೇಷವಾಗಿ ಅನ್ವಯವಾಗುವ ಔದ್ಯೋಗಿಕ ಪ್ರಮಾಣಗಳನ್ನು ರಾಷ್ಟ್ರೀಯ ಔದ್ಯೋಗಿಕ ಮಾನದಂಡಗಳು (ರಾ.ಔ.ಮಾ) ಅನ್ನಲಾಗುತ್ತದೆ. |
| ಅರ್ಹತಾ ಪ್ಯಾಕ್ ಸಂಕೇತ | ಇದು ಅರ್ಹತಾ ಪ್ಯಾಕ್‌ಗಳನ್ನು ಗುರುತಿಸಲೆಂದು ನೀಡಲಾಗಿರುವ ವಿಶಿಷ್ಟವಾದ ಸಂಕೇತವಾಗಿದೆ. |
| ಅರ್ಹತಾ ಪ್ಯಾಕ್ | ಅರ್ಹತಾ ಪ್ಯಾಕ್ ಎಂಬುದು ಯಾವುದೇ ಕೆಲಸದ ಕಾರ್ಯಭಾರವನ್ನು ಯಶಸ್ವಿಯಾಗಿ ನಿಭಾಯಿಸಲು ಬೇಕಿರುವ ಅರ್ಹತೆ, ತರಬೇತಿ ಹಾಗೂ ಇನ್ನಿತರ ಮಾನದಂಡಗಳ ಜೊತೆಯಲ್ಲಿ ಅಗತ್ಯ ರಾ.ಔ.ಮಾ.ಗಳನ್ನು ಒಳಗೊಂಡಿರುತ್ತದೆ. |

## ಸಂಕ್ಷಿಪ್ತ ಪದಗಳು

| ಮುಖ್ಯಪದ/ ಪಾರಿಭಾಷಿಕ ಪದ | ವಿವರಣೆ |
|---|---|
| **ಓಔಖ (ರಾ.ಔ.ಮಾ)** | ರಾಷ್ಟ್ರೀಯ ಔದ್ಯೋಗಿಕ ಮಾನದಂಡ |
| **ಅರ್ಹತೆ ಪ್ಯಾಕ್ (ವಿ. ಪ್ಯಾಕ್)** | ಅರ್ಹತೆ ಪ್ಯಾಕ್ |
| **NSQF (ರಾ.ಕೌ.ವಿ.ಚೌ)** | ರಾಷ್ಟ್ರೀಯ ಕೌಶಲ್ಯ ಅರ್ಹತೆ ಚೌಕಟ್ಟು |
| **ರಾ.ವೃ.ಶಿ.ಅ.ಚೌ.** | ರಾಷ್ಟ್ರೀಯ ವೃತ್ತಿಪರ ಶಿಕ್ಷಣ ಅರ್ಹತೆಗಳ ಚೌಕಟ್ಟು |
| **ರಾ.ವೃ.ಅ.ಚೌ** | ರಾಷ್ಟ್ರೀಯ ವೃತ್ತಿಪರ ಅರ್ಹತೆಗಳ ಚೌಕಟ್ಟು |

# ರಾಷ್ಟ್ರೀಯ ಔದ್ಯೋಗಿಕ ಮಾನದಂಡ



**<u>ಸ್ಥೂಲ ನೋಟ</u>**

**ಈ ಘಟಕವು ಚಲನಚಿತ್ರ ತಯಾರಿಕೆಯ/ ಉತ್ಪಾದನಾ ನಂತರದ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು, ಪ್ರಕ್ರಿಯೆಗಳನ್ನು ಮತ್ತು ಕಾಲಾವಧಿಯನ್ನು ಯೋಜಿಸುವುದರ ಕುರಿತಾಗಿದೆ.**

| ಘಟಕ ಸಂಕೇತ | ಒಇಖ/ಓ1401 |
|---|---|
| ಘಟಕದ ಹೆಸರು (ಕಾರ್ಯಭಾರ) | ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಕೆಲಸದ ಹರಿವನ್ನು ಯೋಜಿಸುವುದು |
| ವಿವರಣೆ | ಈ ಘಟಕವು ಚಲನಚಿತ್ರ ತಯಾರಿಕೆಯಲ್ಲಿ ಉತ್ಪಾದನಾ ನಂತರದ ಪ್ರಕ್ರಿಯೆಗಳ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಕೆಲಸದ ಹರಿವನ್ನು ಯೋಜಿಸುವುದರ ಕುರಿತಾಗಿದೆ. |
| ವ್ಯಾಪ್ತಿ | ಈ ಘಟಕವು ಕೆಳಕಂಡ ಅಂಶಗಳನ್ನು ಹೊಂದಿದೆ<br>* ಚಲನಚಿತ್ರ ತಯಾರಿಕೆ/ ಉತ್ಪಾದನಾ ನಂತರದ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವುದು<br>* ಈ ಪ್ರಕ್ರಿಯೆಗಳನ್ನು ನಡೆಸಲು ಒಂದು ನಿರ್ದಿಷ್ಟ ಮಾರ್ಗ ಹಾಗೂ ಕಾಲಮಿತಿಯ ವೇಳಾಪಟ್ಟಿ ರೂಪಿಸುವುದು<br>* ಶ್ರಮ ಹಾಗೂ ಸಮಯದ ಅಂದಾಜು ಎಣಿಕೆಯನ್ನು ಸಿದ್ಧಪಡಿಸಿ ಅಂತಿಮಗೊಳಿಸುವುದು |
| **ವ್ಯಾಪ್ತಿಗೆ ಸಂಬಂಧಪಟ್ಟಂತೆ ಕಾರ್ಯಕ್ಷಮತೆ ಮಾನದಂಡ (PC)** | |
| ಘಟಕಾಂಶ | ಕಾರ್ಯಕ್ಷಮತೆ ಮಾನದಂಡ PC |
| ಚಲನಚಿತ್ರ ತಯಾರಿಕೆ/ ಉತ್ಪಾದನಾ ನಂತರದ ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳುವುದು | ಸ್ಪರ್ಧಾತ್ಮಕವಾಗಿರಲು ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಮಾಡಲು ಕಲಿತಿರಬೇಕು.<br>PC1. ನಿರ್ದೇಶಕರ ದೂರದೃಷ್ಟಿ, ಸೃಜನಶೀಲತೆ, ತಾಂತ್ರಿಕ ಅಗತ್ಯಗಳ ಜೊತೆಯಲ್ಲಿ ಕಾಲಮಿತಿ ಮತ್ತು ಅಂತಿಮ ಉತ್ಪನ್ನದ ಹೊರಪಡಿಕೆ ಕುರಿತು ನಿರೀಕ್ಷೆಗಳನ್ನು ಅರ್ಥಮಾಡಿಕೊಳ್ಳುವುದು.<br>PC2. ಭಾವನೆಗಳ ಏರಿಳಿತ, ದೃಶ್ಯದ ವ್ಯಾಕರಣ, ಸ್ಫೂರ್ತಿದಾಯಕ ಅಂಶಗಳು ಹಾಗೂ ಪರಿವರ್ತನೆಯ ಅಗತ್ಯಗಳನ್ನೂ ಒಳಗೊಂಡಂತೆ ಕಥೆಯನ್ನು ಹೇಗೆ ಹೇಳಬೇಕೆಂಬುದನ್ನು ಅರ್ಥಮಾಡಿಕೊಳ್ಳುವುದು. |
| ಈ ಪ್ರಕ್ರಿಯೆಗಳನ್ನು ನಡೆಸಲು ಒಂದು ನಿರ್ದಿಷ್ಟ ಮಾರ್ಗ ಹಾಗೂ ಕಾಲಮಿತಿಯ ವೇಳಾಪಟ್ಟಿ ರೂಪಿಸುವುದು | PC3. ನಿರೀಕ್ಷಿತ ಫಲಿತಾಂಶವನ್ನು ಕೊಡಲು ಬೇಕಾದ ಮುಖ್ಯವಾದ ಉತ್ಪಾದನಾ ನಂತರದ ಪ್ರಕ್ರಿಯೆಗಳನ್ನು ಮುಂಚಿತವಾಗಿ ಗುರುತಿಸಿ ಅವುಗಳ ಜಾರಿಗೆ ಕೆಲಸದ ಹರಿವು ನಕ್ಷೆಯನ್ನು ಸಿದ್ಧಪಡಿಸುವುದು.<br>PC4. ಕೆಲಸದ ಹರಿವನ್ನು ಚಿಕ್ಕ ಚಿಕ್ಕ ದೈನಂದಿನ ಚಟುವಟಿಕೆಗಳಾಗಿ ವಿಂಗಡಿಸಿಕೊಳ್ಳುವುದು. |
| ಶ್ರಮ ಹಾಗೂ ಸಮಯದ ಅಂದಾಜು ಎಣಿಕೆಯನ್ನು ಸಿದ್ಧಪಡಿಸಿ ಅಂತಿಮ ಗೊಳಿಸುವುದು | PC5. ನಿರೀಕ್ಷಿತ ಫಲಿತಾಂಶವನ್ನು ಸಾಧಿಸಲು ಮಾಡಬೇಕಾದ ಪ್ರಕ್ರಿಯೆಗಳನ್ನು ಪೂರೈಸಲು ಅಗತ್ಯವಿರುವ ಶ್ರಮವನ್ನು ಮುನ್ನೆಣಿಕೆ ಮಾಡಿ, ಬಜೆಟ್, ಕಾಲಮಿತಿ ಮತ್ತು ತಾಂತ್ರಿಕ ಮಿತಿಗಳ ಒಳಗೆ ಒಂದು ಕಾರ್ಯಯೋಜನೆಯನ್ನು ಮಾಡುವುದು. |
| **ಜ್ಞಾನ ಮತ್ತು ಅರ್ಥ ಮಾಡಿಕೊಳ್ಳುವಿಕೆ** | |
| ಅ. ಸಂಸ್ಥೆಗೆ ಸಂಬಂಧಿಸಿದಂತೆ (ಸಂಸ್ಥೆಯ/ ಕಂಪನಿಯ ಸ್ವರೂಪ ಮತ್ತು ಕಾರ್ಯ ವಿಧಾನಗಳು) | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ತಿಳಿದು ಅರ್ಥ ಮಾಡಿಕೊಂಡಿರಬೇಕು.<br>KA1. ಉತ್ಪನ್ನದ ಕುರಿತಾದ ದೃಷ್ಟಿಕೋನ, ನಿರೀಕ್ಷಿತ ಫಲಿತಾಂಶ, ಹಂಚಿಕೆ/ ಪ್ರದರ್ಶಕ ವಾಹಿನಿಗಳು<br>KA2. ಉತ್ಪಾದನಾ ನಂತರದ ಪ್ರಕ್ರಿಯೆಗಳ ಗುರಿಗಳು, ನಿರೀಕ್ಷಿತ ಫಲಿತಾಂಶ ಹಾಗೂ ಗುಣಮಟ್ಟ ಪ್ರಮಾಣಗಳು<br>KA3. ಅನ್ವಯವಾಗುವ ತಾಂತ್ರಿಕ, ಹಣಕಾಸು ಹಾಗೂ ಸಮಯದ ಮಿತಿಗಳು<br>KA4. ದತ್ತಾಂಶ ಮಾಹಿತಿಗಳ ಸೂಕ್ತ ನಿರ್ವಹಣೆಯ ಹಾಗೂ ಕೆಲಸದ ಹರಿವಿನ ಸಿದ್ಧ ವ್ಯವಸ್ಥೆಗಳು<br>KA5. ಉತ್ಪಾದನಾ ಹಂತದ ಚಟುವಟಿಕೆಗಳು ಮುಂದುವರೆದಂತೆಲ್ಲಾ ಗುಣಮಟ್ಟ ನಿಯಂತ್ರಣವನ್ನು ನಿರ್ವಹಿಸುವಿಕೆ. |
| ಆ. ತಾಂತ್ರಿಕ ಜ್ಞಾನ | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ತಿಳಿದು ಅರ್ಥ ಮಾಡಿಕೊಂಡಿರಬೇಕು.<br>KB1. ಈಗಿನ ಉತ್ಪನ್ನಕ್ಕೆ ಹೊಂದಿಕೆಯಾಗುವ ಚಲನಚಿತ್ರ ತಯಾರಿಕೆ/ ಉತ್ಪಾದನಾ ನಂತರದ ಚಟುವಟಿಕೆಗಳ ತಂತ್ರಗಳು<br>KB2. ಅಗತ್ಯವಿರುವ ಉಪಕರಣಗಳು ಮತ್ತು ತಂತ್ರಾಂಶಗಳು. ಉದಾ: ಫೈನಲ್ ಕಟ್ ಪ್ರೊ, ಅವಿಡ್, ಆಫ್ಟರ್ ಎಫೆಕ್ಟ್ಸ್, ಕ್ವಾಂಟೆಲ್, ಸ್ಮೋಕ್, ಫ್ಲೇಮ್, 3ಡಿಎಸ್ ಮ್ಯಾಕ್ಸ್ ಮತ್ತು ಸೌಂಡ್ ಕ್ಲೀನಿಂಗ್ ತಂತ್ರಾಂಶಗಳು.. ಇತ್ಯಾದಿ<br>KB3. ತಂತ್ರಾಂಶಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಅವುಗಳ ಹೊಸ ಪ್ಯಾಚ್‌ಗಳನ್ನು ಅಪ್‌ಡೇಟ್ ಮಾಡುವುದು ಹೇಗೆ?<br>KB4. ಕೆಲಸದ ಹರಿವು, ಪ್ರಮುಖ ಚಟುವಟಿಕೆಗಳು, ಏನನ್ನು ಕೊಡಬೇಕೆನ್ನುವುದು ಹಾಗೂ ಕಾಲಮಿತಿಗಳನ್ನು ಒಳಗೊಂಡಿರುವ ಸಮಗ್ರ ವೇಳಾಪಟ್ಟಿಗೆ ಚಿತ್ರಕಥೆಯ ಅಗತ್ಯಗಳನ್ನು ಮತ್ತು ಉತ್ಪಾದನಾ ನಂತರದ ಪ್ರಕ್ರಿಯೆಗಳ ಗುರಿಗಳನ್ನು ಮಾರ್ಪಾಡಿಸುವುದು ಹೇಗೆ?<br>KB5. ಸಮಯ, ಸಾಮಾಗ್ರಿ/ ವಸ್ತುಗಳು, ಉಪಕರಣ, ಮಾನವ ಸಂಪನ್ಮೂಲ ಮತ್ತು ಬಜೆಟ್‌ನ ಮೇಲೆ ಪ್ರತಿಯೊಂದು ಚಟುವಟಿಕೆಯ ಪರಿಣಾಮಗಳು<br>KB6. ಒಟ್ಟಾರೆ ಕೆಲಸದ ಹರಿವಿನ ಮೇಲೆ ಪ್ರತಿಯೊಂದು ಚಟುವಟಿಕೆಯ ಪರಿಣಾಮ (ಮೇಲ್ವಿಚಾರಕರು)<br>KB7. ಉತ್ಪಾದನಾ ಅಗತ್ಯಗಳ ಆಧಾರದ ಮೇಲೆ ಹೇಗೆ ಫಲಿತಾಂಶಗಳನ್ನು ಅತ್ಯುತ್ತಮಗೊಳಿಸುವುದು. |

| | |
|---|---|
| | KB8. ಉದ್ದೇಶಿತ ಫಲಿತಾಂಶವನ್ನು ಪಡೆಯಲು ಅಗತ್ಯವಿರುವ ಶ್ರಮ ಹಾಗೂ ಕಾಲಾವಧಿಯನ್ನು ಅಂದಾಜಿಸುವುದು ಹೇಗೆ?<br>KB9. ಸೃಜನಾತ್ಮಕ ಬೇಡಿಕೆ ಮತ್ತು ತಾಂತ್ರಿಕ ಅಗತ್ಯಗಳ ನಡುವಿನ ವ್ಯತ್ಯಾಸವನ್ನು ಹೇಗೆ ತಿಳಿಯುವುದು?<br>KB10. ಉತ್ಪಾದನಾ ನಂತರದ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ದೇಶೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಅತ್ಯುತ್ತಮ ಕಾರ್ಯವಿಧಾನಗಳು<br>KB11. ಅನ್ವಯವಾಗುವ ಹಕ್ಕುಸ್ವಾಮ್ಯ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳು<br>KB12. ಸಂಕಲನ ಸಲಕರಣೆಗಳ ಮುಂದೆ ದೀರ್ಘಕಾಲ ಕೆಲಸ ಮಾಡುವುದನ್ನು ಪರಿಗಣಿಸಿ ಅನ್ವಯವಾಗುವ ಆರೋಗ್ಯ ಮತ್ತು ಸುರಕ್ಷತಾ ಮಾರ್ಗದರ್ಶಿ ಸೂತ್ರಗಳು |
| **ಕೌಶಲ್ಯ (ಐಚ್ಛಿಕ)** | |
| ಅ. ತಿರುಳು ಕೌಶಲ್ಯ/ ಸಾಮಾನ್ಯ ಕೌಶಲ್ಯ | **ಬರವಣಿಗೆ ಸಾಮರ್ಥ್ಯ** |
| ೧ | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA1. ಇಡೀ ತಂಡಕ್ಕೆ ಕೈಪಿಡಿಯಾಗಬಲ್ಲ, ತಂಡದ ಎಲ್ಲರ ನಡುವೆ ಹಂಚಿಕೊಳ್ಳಲು ಯೋಗ್ಯವಾದ 'ಉತ್ಪಾದನಾ ನಂತರ'ದ ಅಗತ್ಯಗಳ ಕುರಿತಾದ ದಾಖಲೆಯನ್ನು ಬರೆಯುವುದು.<br>SA2. ಇದರಲ್ಲಿರುವ ಪ್ರಕ್ರಿಯೆಗಳ ಮತ್ತು ಬಳಸಬೇಕಾದ ತಂತ್ರಜ್ಞಾನಗಳ ಬಗ್ಗೆ ತೆಗೆದುಕೊಂಡ ತೀರ್ಮಾನಗಳನ್ನು ಕಾರಣಸಹಿತ ದಾಖಲಿಸುವುದು.<br>SA3. ಇಡೀ ಯೋಜನೆಯಲ್ಲಿ ಪ್ರಮುಖವಾಗಿ ಮುಗಿಸಬೇಕಾದ ಕೆಲಸಗಳನ್ನು, ಅವುಗಳ ಕಾಲಮಿತಿ ವೇಳಾಪಟ್ಟಿಯೊಂದಿಗೆ ಮತ್ತು ಬೇಕಾದ ಸಂಪನ್ಮೂಲಗಳನ್ನು ಹೊಂದಿರುವ ಕೆಲಸ–ಯೋಜನೆಯನ್ನು ದಾಖಲಿಸುವುದು (ಮೇಲ್ವಿಚಾರಕರು)<br>SA4. ತಂಡದ ಅನುಕೂಲಕ್ಕಾಗಿ ವಿಭಿನ್ನ ಸಲಕರಣೆಗಳು ಹಾಗೂ ತಂತ್ರಾಂಶಗಳ ಬಗ್ಗೆ "ಮಾಡಬೇಕಾದ ಹಾಗೂ ಮಾಡಬಾರದ" ಕೆಲಸಗಳ ಪಟ್ಟಿಯನ್ನು ದಾಖಲಿಸುವುದು<br>SA5. ತಂಡಕ್ಕೆ ಸಂಬಂಧಪಡಬಹುದಾದ ಇನ್ನಿತರ ವಿಷಯಗಳ ಬಗ್ಗೆ ದಾಖಲೆ ಸಿದ್ಧಪಡಿಸುವುದು (ಉದಾ: ಉದ್ದೇಶಿತ ಪ್ರೇಕ್ಷಕರ ಅಗತ್ಯಗಳು, ಮಾರುಕಟ್ಟೆ, ಅಂತಿಮ ಉತ್ಪನ್ನ, ಸಂಬಂಧಿಸಿದ ವೀಡಿಯೋಗಳು ಮತ್ತು ಕೊಂಡಿಗಳು.. ಇತ್ಯಾದಿ) |
| | **ಓದುವ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA6. ಚಿತ್ರಕಥೆಯನ್ನು ಓದಿ ಮನನ ಮಾಡಿಕೊಂಡು ಅಗತ್ಯಗಳನ್ನು ಗುರುತಿಸುವುದು<br>SA7. 'ಉತ್ಪಾದನಾ ನಂತರ'ದ ಕ್ಷೇತ್ರದಲ್ಲಿ ಹೊಸದಾಗಿ ಮೂಡಿಬರುತ್ತಿರುವ ನವೀನ ತಂತ್ರಜ್ಞಾನಗಳ ಬಗ್ಗೆ ಅಧ್ಯಯನ<br>SA8. ಉಪಕರಣಗಳು ಹಾಗೂ ತಂತ್ರಾಂಶಗಳ ಬಗ್ಗೆ ಬಳಕೆದಾರರ ಕೈಪಿಡಿಯನ್ನು ಓದುವುದು<br>SA9. ಅಂತಿಮ ಉತ್ಪನ್ನವನ್ನು ತಲುಪಿಸಬೇಕಾದ ಪ್ರೇಕ್ಷಕರು ಹಾಗೂ ಮಾರುಕಟ್ಟೆಯ ಅಭಿರುಚಿ ಮತ್ತು ಆದ್ಯತೆಗಳ ಬಗ್ಗೆ ಓದಿಕೊಳ್ಳುವುದು. |
| | **ಮೌಖಿಕ ಸಂವಹನ (ಆಲಿಸುವ ಮತ್ತು ಮಾತಾಡುವ ಸಾಮರ್ಥ್ಯ)** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA10. ನಿರ್ದೇಶಕರು ಹಾಗೂ ನಿರ್ಮಾಪಕರ ಸೃಜನಾತ್ಮಕ ದೃಷ್ಟಿಕೋನವನ್ನು ಅರ್ಥ ಮಾಡಿಕೊಳ್ಳುವುದು<br>SA11. ಉತ್ತಮ ಸಂವಹನದ ಮೂಲಕ, ಸೂಚನೆಗಳನ್ನು ದಾಟಿಸಿ, ತೊಡಕುಗಳನ್ನು ಚರ್ಚಿಸಿ ನಿವಾರಿಸುವ ಮೂಲಕ, ಬೇರೆ ಬೇರೆ ಹೊಣೆಗಾರಿಕೆ ಹೊಂದಿರುವ 'ಉತ್ಪಾದನಾ ನಂತರ' ಚಟುವಟಿಕೆಗಳ ತಂಡದ ಪ್ರತಿಯೊಬ್ಬ ಸದಸ್ಯರ ಜೊತೆ ಅವರು ಮಾಡಬೇಕಾದ ಕೆಲಸಗಳಿಗೆ ತಗಲುವ ಶ್ರಮವನ್ನು ಗ್ರಹಿಸಿ (ಮೇಲ್ವಿಚಾರಕರು) |
| ಆ. ವೃತ್ತಿಪರ ಕೌಶಲ್ಯ | **ಯೋಜಿಸಿ ಮತ್ತು ಏರ್ಪಡಿಸಿ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB1. ಸೃಜನಾತ್ಮಕ ಹಾಗೂ ತಾಂತ್ರಿಕ ಅಗತ್ಯಗಳಿಗೆ ಅನುಗುಣವಾಗಿ ಚಟುವಟಿಕೆಗಳನ್ನು, ಸಂಪನ್ಮೂಲಗಳನ್ನು ಮತ್ತು ವೇಳಾಪಟ್ಟಿಯನ್ನು ಯೋಜಿಸಿ.<br>SB2. ಕಾಲಮಿತಿಯನ್ನು ಮೀರದಂತಿರಲು ಸಮಯ ನಿರ್ವಹಣಾ ತಂತ್ರಗಳನ್ನು ಬಳಸಿ<br>SB3. ಎಲ್ಲಾ ಚಟುವಟಿಕೆಗಳನ್ನು ಸಮಯ ಮಿತಿಯ ಗಡುವು ಮೀರದಂತೆ ಸಾಧಿಸಿ<br>SB4. ವೇಗವಾಗಿ ಚುರುಕಾಗಿ ಕೆಲಸ ನಡೆಯುವ ವಾತಾವರಣದಲ್ಲಿ ಚೆನ್ನಾಗಿ ಕೆಲಸ ಮಾಡಿ |
| | **ಸಮಸ್ಯೆ ಬಗೆಹರಿಸುವಿಕೆ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB1. ಉತ್ಪಾದನಾ ನಂತರದ ಚಟುವಟಿಕೆಗಳನ್ನು ನಡೆಸುವಾಗ ಎದುರಾಗಬಹುದಾದ ಸಮಸ್ಯೆಗಳನ್ನು ಗುರುತಿಸಿ ಮತ್ತು ಅವುಗಳಿಗೆ ಅಗತ್ಯ ಪರಿಹಾರಗಳನ್ನು ಕಂಡುಕೊಳ್ಳಿ |


| | |
|---|---|
| | **ವಿಶ್ಲೇಷಣಾತ್ಮಕ ಚಿಂತನೆ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB2. ಸಣ್ಣ ವಿವರಗಳನ್ನೂ ಗಮನಿಸುವ ತೀಕ್ಷ್ಣ ನೋಟವನ್ನು ಹೊಂದಿ ಮತ್ತು ಅಂತಿಮ ಉತ್ಪನ್ನದ ಬಗ್ಗೆ ಸೌಂದರ್ಯ ಪ್ರಜ್ಞೆಯನ್ನು ಹೊಂದಿರಿ. |
| | **ವಿಮರ್ಶಾತ್ಮಕ ಚಿಂತನೆ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB3. ಕಚ್ಚಾ ತುಣುಕುಗಳು, ಮೂಲ ಯೋಜನೆಗೆ ಪೂರಕವಾದ ಗುಣಮಟ್ಟವನ್ನು ಹೊಂದಿದೆಯೇ ಇಲ್ಲವೇ ಎಂಬುದನ್ನು ಆರಂಭದಲ್ಲೇ ಪರೀಕ್ಷಿಸಿಕೊಳ್ಳಿ. |
| | **ನಿರ್ಣಯಾತ್ಮಕತೆ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB4. ಕೊಡಲಾದ ಯೋಜನೆಯನ್ನು ಬೆಂಬಲಿಸುವಂತಹ ಅಗತ್ಯಗಳು ಮತ್ತು ಯೋಜನೆಯ ಕೆಲಸದ ಹರಿವುಗಳ ಬಗ್ಗೆ ನಿರ್ಣಯಗಳನ್ನು ಮಾಡಿ |
| | **ಗ್ರಾಹಕ ಕೇಂದ್ರಿತ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB5. ಗ್ರಾಹಕ/ ಕಕ್ಷಿದಾರರ ಪರಿಕಲ್ಪನೆ, ವಸ್ತು ವಿಷಯ ಹಾಗೂ ಸಂದೇಶಗಳನ್ನು ಬೆಂಬಲಿಸುವಂತಹ ಕೆಲಸದ ಹರಿವನ್ನು ಯೋಜಿಸಿ |

## ರಾ.ಔ.ಮಾ.ದ ಆವೃತ್ತಿ ನಿಯಂತ್ರಣ

| | | | |
|---|---|---|---|
| ರಾ.ಔ.ಮಾ ಸಂಕೇತ | MES/N1401 | | |
| ಮನ್ನಣೆ: NSQF (ರಾ. ಕೌ.ವಿ.ಚೌ) | ಇನ್ನೂ ತೀರ್ಮಾನಿಸಬೇಕಿದೆ | ಆವೃತ್ತಿ ಸಂಖ್ಯೆ: | 1.0 |
| ವಲಯ | ಮಾಧ್ಯಮ ಮತ್ತು ಮನರಂಜನೆ | ಕರಡು ಪ್ರತಿ ದಿನಾಂಕ: | 16/11/2014 |
| ಉಪ ವಲಯ | ಸಿನಿಮಾ, ಟೆಲಿವಿಷನ್, ಅನಿಮೇಶನ್ ಮತ್ತು ಜಾಹಿರಾತು | ಅಂತಿಮ ಪರಿಷ್ಕರಣೆ ದಿನಾಂಕ: | 20/03/2018 |
| ವೃತ್ತಿ | ಸಂಕಲನಕಾರ | ಮುಂದಿನ ಪರಿಶೀಲನೆ ದಿನಾಂಕ: | 20/06/2021 |



# ರಾಷ್ಟ್ರೀಯ ಔದ್ಯೋಗಿಕ ಮಾನದಂಡ



**ಸ್ಥೂಲ ನೋಟ**


**ಈ ಘಟಕವು ಚಲನಚಿತ್ರ ತಯಾರಿಕೆಯ/ ಉತ್ಪಾದನಾ ನಂತರದ ಪ್ರಕ್ರಿಯೆಗಳಲ್ಲಿ ಬಳಕೆಯಾಗುವ ಸಾಮಗ್ರಿಗಳು ಹಾಗೂ ಉಪಕರಣಗಳನ್ನು ಸರಿಯಾಗಿ ನಿರ್ವಹಿಸುವುದರ ಕುರಿತಾಗಿದೆ.**

ರಾಷ್ಟ್ರೀಯ ಔದ್ಯೋಗಿಕ ಮಾನದಂಡಗಳು

| ಘಟಕ ಸಂಕೇತ | MES/N1402 |
|---|---|
| ಘಟಕದ ಹೆಸರು (ಕಾರ್ಯಭಾರ) | ಸಾಮಗ್ರಿಗಳು ಮತ್ತು ಉಪಕರಣಗಳ ನಿರ್ವಹಣೆ |
| ವಿವರಣೆ | ಈ ಔ.ಮಾ. ಘಟಕವು ಉತ್ಪಾದನಾ ನಂತರದ ಪ್ರಕ್ರಿಯೆಗಳಲ್ಲಿ ಬಳಸಲಾಗುವ ಎಲ್ಲಾ ಸಾಮಾಗ್ರಿಗಳು ಹಾಗೂ ಉಪಕರಣಗಳ ನಿರ್ವಹಣೆಯನ್ನು ಕುರಿತಾಗಿದೆ. |
| ವ್ಯಾಪ್ತಿ | ಈ ಘಟಕವು ಕೆಳಕಂಡ ಅಂಶಗಳನ್ನು ಹೊಂದಿದೆ<br>* ಸಾಮಗ್ರಿಗಳು ಮತ್ತು ಉಪಕರಣಗಳನ್ನು ಉತ್ಪಾದನೋತ್ತರ ಚಟುವಟಿಕೆಗೆ ಸಿದ್ಧ ಮಾಡಿಕೊಳ್ಳುವುದು.<br>* ಉತ್ಪಾದನೋತ್ತರ ಚಟುವಟಿಕೆಗಳಲ್ಲಿ ಮಧ್ಯಂತರ ಕೆಲಸ–ಉತ್ಪನ್ನಗಳನ್ನು ನಿರ್ವಹಿಸುವುದು<br>* ಕೆಲಸ–ಉತ್ಪನ್ನಗಳು ಹಂಚಿಕೆ/ ಪ್ರದರ್ಶನಕ್ಕೆ ಅಗತ್ಯ ತಾಂತ್ರಿಕ ನಿಯತಾಂಶಗಳಂತೆ ಇರುವುದನ್ನು ಖಚಿತಪಡಿಸಿಕೊಳ್ಳುವುದು |
| **ವ್ಯಾಪ್ತಿಗೆ ಸಂಬಂಧಪಟ್ಟಂತೆ ಕಾರ್ಯಕ್ಷಮತೆ ಮಾನದಂಡ (PC)** | |
| **ಘಟಕಾಂಶ** | **ಕಾರ್ಯಕ್ಷಮತೆ ಮಾನದಂಡ** |
| ಸಾಮಗ್ರಿಗಳು ಮತ್ತು ಉಪಕರಣಗಳನ್ನು ಉತ್ಪಾದನೋತ್ತರ ಚಟುವಟಿಕೆಗೆ ಸಿದ್ಧ ಮಾಡಿಕೊಳ್ಳುವುದು | ಸ್ಪರ್ಧಾತ್ಮಕವಾಗಿರಲು ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಮಾಡಲು ಕಲಿತಿರಬೇಕು<br>PC1. ಕಚ್ಚಾ ವಸ್ತುವನ್ನು/ ವೀಡಿಯೋಗಳನ್ನು ಒಟ್ಟು ಮಾಡಿ ಚಿತ್ರದ ಉತ್ಪಾದನೋತ್ತರ ಕೆಲಸಕ್ಕೆ ಬೇಕಿರುವಷ್ಟನ್ನು ಆರಿಸಿಕೊಳ್ಳುವುದು.<br>PC2. ಕಚ್ಚಾ ವಸ್ತುವನ್ನು/ ವೀಡಿಯೋ ತುಣುಕುಗಳನ್ನು ಅರ್ಥೈಸಿಕೊಂಡು ಉತ್ಪಾದನೋತ್ತರ ಚಟುವಟಿಕೆಗೆ ಸಿದ್ಧತೆ ಮಾಡಿಕೊಳ್ಳುವುದು.<br>PC3. ತಂತ್ರಾಂಶಗಳು ಬಳಕೆಗೆ ಸಿದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು. (ಉದಾ: ಫೈನಲ್ ಕಟ್ ಪ್ರೊ, ಎವಿಡ್, ಆಫ್ಟರ್ ಎಫೆಕ್ಟ್ ಮತ್ತು ಸೌಂಡ್ ಕ್ಲೀನಿಂಗ್ ತಂತ್ರಾಂಶಗಳು) |
| ಉತ್ಪಾದನೋತ್ತರ ಚಟುವಟಿಕೆಗಳಲ್ಲಿ ಮಧ್ಯಂತರ ಕೆಲಸ–ಉತ್ಪನ್ನಗಳನ್ನು ನಿರ್ವಹಿಸುವುದು | PC4. ಸೂಕ್ತ ಶೇಖರಣಾ ವಿಧಾನದಲ್ಲಿ ನಡುನಡುವೆ ಪರ್ಯಾಯ ಪ್ರತಿಗಳನ್ನು ಉಳಿಸಿ ಶೇಖರಿಸಿಡುವುದು. |
| ಕೆಲಸ – ಉತ್ಪನ್ನಗಳು ಹಂಚಿಕೆ/ ಪ್ರದರ್ಶನಕ್ಕೆ ಅಗತ್ಯ ತಾಂತ್ರಿಕ ನಿಯತಾಂಶಗಳಂತೆ ಇರುವುದನ್ನು ಖಚಿತಪಡಿಸಿಕೊಳ್ಳುವುದು | PC5. ಅಂತಿಮ ಉತ್ಪನ್ನವನ್ನು ಅಗತ್ಯವಿರುವ ನಮೂನೆಯಲ್ಲಿ (ಟಿಐ4, ಜಿತು, ತಿಟಿತ, ಟಿರಿಂ, ಟಿಂತ..  ಇತ್ಯಾದಿ) ಉಳಿಸುವುದು ಮತ್ತು ಅಗತ್ಯದ/ ಪ್ರದರ್ಶನಕ್ಕೆ ಬೇಕಿರುವ ಮಾಧ್ಯಮಕ್ಕೆ (ಆಗಿಅ, ಟೇಪು, ಫಿಲ್ಮ್, ಡಿಜಿಟಲ್ ಇತ್ಯಾದಿ) ವರ್ಗಾಯಿಸುವುದು.<br>PC6. ಹಿಂದಿನ ಬೇಡದ ಅಂಶಗಳನ್ನೆಲ್ಲಾ ತೆಗೆದು ಹಾಕಿ ತಂತ್ರಾಂಶವನ್ನು ಮುಂದಿನ ಯೋಜನೆಗೆ ಬಳಸಲು ಸಿದ್ಧಪಡಿಸಿಟ್ಟುಕೊಳ್ಳುವುದು. |
| **ಜ್ಞಾನ ಮತ್ತು ಅರ್ಥ ಮಾಡಿಕೊಳ್ಳುವಿಕೆ** | |
| ಅ. ಸಂಸ್ಥೆಗೆ ಸಂಬಂಧಿಸಿದಂತೆ (ಸಂಸ್ಥೆಯ/ ಕಂಪನಿಯ ಸ್ವರೂಪ ಮತ್ತು ಕಾರ್ಯವಿಧಾನಗಳು) | ಸ್ಪರ್ಧಾತ್ಮಕವಾಗಿರಲು ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಮಾಡಲು ಕಲಿತಿರಬೇಕು<br>KA1. ಅಂತಿಮ ಉತ್ಪನ್ನದ ಉದ್ದೇಶ ಮತ್ತು ಉದ್ದೇಶಿತ ಬಳಕೆ<br>KA2. ಅಂತಿಮ ಉತ್ಪನ್ನದಿಂದ ನಿರೀಕ್ಷಿತ ಗುಣಮಟ್ಟದ ಮಾನದಂಡಗಳು ಸೇರಿದಂತೆ ಕೆಲಸ–ಉತ್ಪನ್ನದ ಸೃಜನಾತ್ಮಕ ಮತ್ತು ತಾಂತ್ರಿಕ ವಿಶೇಷಣಗಳು.<br>KA3. ಅಂತಿಮ ಉತ್ಪನ್ನದ ಉದ್ದೇಶಿತ ವಿತರಣೆ/ಪ್ರದರ್ಶನ ಮಾಧ್ಯಮಗಳು<br>KA4. ಸುವ್ಯಸ್ಥಿತ ಮಾಹಿತಿ ನಿರ್ವಹಣೆ ಮತ್ತು ಕೆಲಸದ ಹರಿವಿನ ವ್ಯವಸ್ಥೆ<br>KA5. ಉತ್ಪಾದನಾ ಹಂತದ ಚಟುವಟಿಕೆಗಳು ಮುಂದುವರೆದಂತೆಲ್ಲಾ ಗುಣಮಟ್ಟ ನಿಯಂತ್ರಣವನ್ನು ನಿರ್ವಹಿಸುವುದು. |
| ಆ. ತಾಂತ್ರಿಕ ಜ್ಞಾನ | KB1. ಸಂಬಂಧಿಸಿದ ಉಪಕರಣಗಳು ಮತ್ತು ತಂತ್ರಾಂಶಗಳ ಮೇಲೆ ಹೇಗೆ ಕೆಲಸ ಮಾಡುವುದು. (ಉದಾ: ಫೈನಲ್ ಕಟ್ ಪ್ರೊ, ಎವಿಡ್, ಆಫ್ಟರ್ ಎಫೆಕ್ಟ್ ಮತ್ತು ಸೌಂಡ್ ಕ್ಲೀನಿಂಗ್ ತಂತ್ರಾಂಶಗಳು)<br>KB2. ಅಂತಿಮ ಉತ್ಪನ್ನದ ಅಗತ್ಯದ ಮೇರೆಗೆ ಸಾಮಾಗ್ರಿಗಳನ್ನು ಯಾವ ಫಾರ್ಮ್ಯಾಟ್, ರೆಸಲ್ಯೂಷನ್ ಮತ್ತು ಗುಣಮಟ್ಟಗಳಲ್ಲಿ ಇಂಜೆಸ್ಟ್ ಮಾಡಬೇಕೆಂಬುದು<br>KB3. ಅಂತಿಮ ಉತ್ಪನ್ನದ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ನೀಡಲಾದ ಸಾಮಗ್ರಿ/ ತುಣುಕುಗಳ ಗುಣಮಟ್ಟದಲ್ಲಿ ಇರಬಹುದಾದ ತೋದಕುಗಳನ್ನು ಗುರುತಿಸುವುದು.<br>KB4. ಉತ್ಪಾದನೆಯ ಅಗತ್ಯಕ್ಕೆ ಸೂಕ್ತವಾದ ಶೇಖರಣಾ ಮಾಧ್ಯಮ<br>KB5. ಉತ್ಪಾದನೆಗೆ ಪೂರಕವಾಗಿ ಕಡತಗಳಿಗೆ ಹೆಸರುಗಳನ್ನು ನೀಡುವುದು.<br>KB6. ತಂತ್ರಜ್ಞಾನ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ತಿಳಿದುಕೊಳ್ಳುತ್ತಾ ಅದಕ್ಕೆ ಪೂರಕವಾಗಿ ಕೌಶಲ್ಯಗಳನ್ನು ನವೀಕರಿಸುವುದು ಹೇಗೆ<br>KB7. ಅನ್ವಯವಾಗುವ ಆರೋಗ್ಯ ಮತ್ತು ಸುರಕ್ಷತಾ ನಿಯಮಗಳು |


| ಕೌಶಲ್ಯ (ಐಚ್ಛಿಕ) | |
|---|---|
| ಅ. ತಿರುಳು ಕೌಶಲ್ಯ/ ಸಾಮಾನ್ಯ ಕೌಶಲ್ಯ | **ಬರವಣಿಗೆ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA1. ಕೆಲಸ–ಉತ್ಪನ್ನಕ್ಕೆ ಪೂರಕವಾದ ನಕ್ಷೆಗಳ ಸಹಿತ ಎಲ್ಲಾ ದಾಖಲೆಗಳನ್ನು ಸಿದ್ಧಪಡಿಸುವುದು |
| | **ಓದುವ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA2. ಉಪಕರಣಗಳು ಹಾಗೂ ತಂತ್ರಾಂಶಗಳ ಬಗ್ಗೆ ಬಳಕೆದಾರರ ಕೈಪಿಡಿಯನ್ನು ಓದುವುದು<br>SA3. ಕ್ಯಾಮರಾದಿಂದ ಬಂದ ಕಚ್ಚಾ ದೃಶ್ಯ ತುಣುಕನ್ನು ಒಳಗೊಂಡಂತೆ ಕಚ್ಚಾ ತುಣುಕುಗಳು/ ವಸ್ತುಗಳನ್ನು, ಸಂಭಾಷಣೆ, ಧ್ವನಿ ಪರಿಣಾಮಗಳು, ಗ್ರಾಫಿಕ್ಸ್ ಮತ್ತು ವಿಶೇಷ ಪರಿಣಾಮಗಳನ್ನು ಸಂಗ್ರಹಿಸುವುದು ಮತ್ತು ವೀಕ್ಷಿಸುವುದು<br>SA4. ಉತ್ಪಾದನಾ ನಂತರದ ಪರಿಕಲ್ಪನೆ ಚಟುವಟಿಕೆಗಳ ಸಾಧ್ಯತೆಗಳಿಗೆ ಉಪಾಯಗಳನ್ನು ನೀಡಬಲ್ಲ, ಕೆಲಸ–ಉತ್ಪನ್ನಗಳ ಮತ್ತು ಉತ್ಪನ್ನಗಳ ಉಲ್ಲೇಖಗಳನ್ನು ಸಂಗ್ರಹಿಸಿ. |
| | **ಮಾತುಗಾರಿಕೆ ಸಾಮರ್ಥ್ಯ (ಆಲಿಸುವ ಮತ್ತು ಮಾತಾಡುವ ಕೌಶಲ್ಯ)** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA5. ನಿರ್ದೇಶಕರು, ನಿರ್ಮಾಪಕರು ಹಾಗೂ ಮೇಲ್ವಿಚಾರಕರೊಂದಿಗೆ ಚರ್ಚಿಸಿ ಅವರ ಉತ್ಪನ್ನದ ಅಗತ್ಯಗಳನ್ನು ಮತ್ತು ವಿಶೇಷಣಗಳನ್ನು ಅರ್ಥಮಾಡಿಕೊಳ್ಳುವುದು<br>SA6. ಉತ್ಪಾದನಾ ನಂತರದ ಪ್ರಕ್ರಿಯೆಗಳಿಗೆ ಸಮಸ್ಯೆಯಾಗಬಲ್ಲ, ಕಚ್ಚಾ ತುಣುಕುಗಳಲ್ಲಿರುವ ತೊಡಕುಗಳನ್ನು ಚರ್ಚಿಸಿ ಮತ್ತು ಅವನ್ನು ಬಗೆಹರಿಸುವ ಸಲಹೆಗಳನ್ನು ನೀಡುವುದು |
| ಆ. ವೃತ್ತಿಪರ ಕೌಶಲ್ಯ | **ಯೋಜಿಸುವುದು ಮತ್ತು ವ್ಯವಸ್ಥೆಗೊಳಿಸುವುದು** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA5. ನಿರ್ದೇಶಕರು, ನಿರ್ಮಾಪಕರು ಹಾಗೂ ಮೇಲ್ವಿಚಾರಕರೊಂದಿಗೆ ಚರ್ಚಿಸಿ ಅವರ ಉತ್ಪನ್ನದ ಅಗತ್ಯಗಳನ್ನು ಮತ್ತು ವಿಶೇಷಣಗಳನ್ನು ಅರ್ಥಮಾಡಿಕೊಳ್ಳುವುದು<br>SA6. ಉತ್ಪಾದನಾ ನಂತರದ ಪ್ರಕ್ರಿಯೆಗಳಿಗೆ ಸಮಸ್ಯೆಯಾಗಬಲ್ಲ, ಕಚ್ಚಾ ತುಣುಕುಗಳಲ್ಲಿರುವ ತೊಡಕುಗಳನ್ನು ಚರ್ಚಿಸಿ ಮತ್ತು ಅವನ್ನು ಬಗೆಹರಿಸುವ ಸಲಹೆಗಳನ್ನು ನೀಡುವುದು |
| | **ಸಮಸ್ಯೆ ಬಗೆಹರಿಸುವಿಕೆ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB4. ಉತ್ಪಾದನಾ ನಂತರದ ಚಟುವಟಿಕೆಗಳಿಗೆ ಹಾನಿ ಮಾಡಬಲ್ಲಂತಹ, ದೃಶ್ಯ ಅಥವಾ ಧ್ವನಿ ತೊಡಕಿನಂತಹ ಯಾವುದೇ ತೊಡಕುಗಳನ್ನು ಕಚ್ಚಾ ಸಾಮಗ್ರಿಗಳಲ್ಲಿ/ ತುಣುಕುಗಳಲ್ಲಿ ಕಂಡಲ್ಲಿ ಕೂಡಲೇ ಎಚ್ಚರಿಸಿ ಮತ್ತು ಸೂಕ್ತ ನಿವಾರಣಾ ಕ್ರಮಗಳನ್ನು ಕೈಗೊಳ್ಳಿ<br>SB5. ಉಪಕರಣಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಸಮಸ್ಯೆಗಳನ್ನು ಗುರುತಿಸಿ ಮತ್ತು ಬಗೆಹರಿಸಿ |
| | **ನಿರ್ಣಯ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB6. ಉದ್ದೇಶಿತ ಹಂಚಿಕೆ ಮಾಧ್ಯಮ ಮತ್ತು ಪ್ರದರ್ಶನ ವೇದಿಕೆಗಳ ಜೊತೆಯಲ್ಲಿ, ಸಿದ್ಧಪಡಿಸಿದ ಅಂತಿಮ ಉತ್ಪನ್ನದಲ್ಲಿನ ಎಲ್ಲಾ ಸಾಮಗ್ರಿಗಳೂ/ ಉತ್ಪನ್ನಗಳೂ ಹೊಂದಿಕೆಯಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳಿ. |
| | **ಗ್ರಾಹಕ ಕೇಂದ್ರಿತ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB7. ಗ್ರಾಹಕ/ ಕಕ್ಷಿದಾರರ ಜೊತೆ ಅವರ ಪರಿಕಲ್ಪನೆಗಳ ಸುತ್ತ ಸೃಜನಾತ್ಮಕ ಚರ್ಚೆಯಲ್ಲಿ ಪಾಲ್ಗೊಳ್ಳಿ ಮತ್ತು ಸಹಕರಿಸಿ<br>SB8. ನೀವು ಅಳವಡಿಸಿಕೊಳ್ಳುವ ಪ್ರತಿಯೊಂದು ಸಾಮಗ್ರಿಯೂ ಗ್ರಾಹಕರ ನಿರೀಕ್ಷೆಗೆ ಅನುಗುಣವಾಗಿರುವುದನ್ನು ಖಚಿತಪಡಿಸಿಕೊಳ್ಳಿ. |

| | |
|---|---|
| | **ವಿಮರ್ಶಾತ್ಮಕ ಚಿಂತನೆ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB9. ಕಥೆಯನ್ನು ಸುಲಲಿತವಾಗಿ ಹೇಳಲು ಸಹಾಯವಾಗುವ, ಇದುವರೆವಿಗೆ ಯೋಚಿಸಿರದ ಉಪಾಯಗಳನ್ನು ಅಭಿವೃದ್ಧಿಪಡಿಸಿ.<br>SB10. ಸಿದ್ಧಪಡಿಸಿರುವ ಗ್ರಾಫಿಕ್ ಅಂಶಗಳು ಕಥೆ ಮತ್ತು ಸಂದೇಶಗಳನ್ನು ಪರಿಣಾಮಕಾರಿಯಾಗಿ ಹೇಳುತ್ತಿವೆಯೇ ಅಥವಾ ಇಲ್ಲವೇ, ನಿರ್ಮಾಪಕ/ ನಿರ್ದೇಶಕ/ ಗ್ರಾಹಕರು ಉದ್ದೇಶಿಸಿದಂತೆ ಪಾತ್ರಗಳ ಗುಣಲಕ್ಷಣಗಳನ್ನು ಸಮರ್ಥವಾಗಿ ಬಿಂಬಿಸುತ್ತಿವೆಯೇ ಅಥವಾ ಇಲ್ಲವೇ ಉದ್ದೇಶಿತ ಭಾವನೆಗಳನ್ನು ವ್ಯಕ್ತಪಡಿಸುತ್ತಿವೆಯೇ ಅಥವಾ ಇಲ್ಲವೇ ಎಂಬುದನ್ನು ವಿಮರ್ಶಾತ್ಮಕವಾಗಿ ತೀಕ್ಷ್ಣವಾಗಿ ನೋಡಿ. |
| | **ವಿಶ್ಲೇಷಣಾ ಸಾಮರ್ಥ್ಯ** |
| | SB11. ನಿರೀಕ್ಷಿತ ಕಲಾತ್ಮಕ ಹಾಗೂ ತಾಂತ್ರಿಕ ಪ್ರಮಾಣಗಳಿಗೆ ತಕ್ಕಂತೆ ಬಳಸುತ್ತಿರುವ ಉಪಕರಣಗಳು ಇವೆಯೇ ಇಲ್ಲವೇ ಎಂಬುದರ ಮೌಲ್ಯಮಾಪನ ಹೇಗೆ ಮಾಡುವುದು |



## ರಾ.ಔ.ಮಾ.ದ ಆವೃತ್ತಿ ನಿಯಂತ್ರಣ

| | | | |
|---|---|---|---|
| ರಾ.ಔ.ಮಾ ಸಂಕೇತ | MES/N1402 | | |
| ಮನ್ನಣೆ: | ಇನ್ನೂ ತೀರ್ಮಾನಿಸಬೇಕಿದೆ | ಆವೃತ್ತಿ ಸಂಖ್ಯೆ: | 1.0 |
| ಕೈಗಾರಿಕೆ | ಮಾಧ್ಯಮ ಮತ್ತು ಮನರಂಜನೆ | ಕರಡು ಪ್ರತಿ ದಿನಾಂಕ: | 16/11/2014 |
| ಕೈಗಾರಿಕೆಯ ಉಪ ವಲಯ | ಸಿನಿಮಾ, ಟೆಲಿವಿಷನ್, ಅನಿಮೇಶನ್ ಮತ್ತು ಜಾಹಿರಾತು | ಅಂತಿಮ ಪರಿಷ್ಕರಣೆ ದಿನಾಂಕ: | 20/03/2018 |
| ವೃತ್ತಿ | ಉತ್ಪಾದನಾ ನಂತರದ ಚಟುವಟಿಕೆ | ಮುಂದಿನ ಪರಿಶೀಲನೆ ದಿನಾಂಕ: | 20/06/2021 |



# ರಾಷ್ಟ್ರೀಯ ಔದ್ಯೋಗಿಕ ಮಾನದಂಡ



**ಸ್ಥೂಲ ನೋಟ**

**ಈ ಘಟಕವು ಚಲನಚಿತ್ರದ ಉತ್ಪಾದಿತ ಸಾಮಗ್ರಿಗಳನ್ನು ಕತ್ತರಿಸುವ ಮತ್ತು ಜೋಡಿಸಿ, ಉತ್ಪಾದನಾ ಅಗತ್ಯಗಳನ್ನು ಪೂರೈಸುವ ಅರ್ಥಪೂರ್ಣವಾದ ಸರಣಿಯಾಗಿಸುವುದರ ಕುರಿತಾಗಿದೆ.**

ರಾಷ್ಟ್ರೀಯ ಔದ್ಯೋಗಿಕ ಮಾನದಂಡಗಳು

| ಘಟಕ ಸಂಕೇತ | MES/N1403 |
|---|---|
| ಘಟಕದ ಹೆಸರು (ಕಾರ್ಯಭಾರ) | ಉತ್ಪನ್ನವನ್ನು ಸಂಕಲಿಸುವುದು |
| ವಿವರಣೆ | ಈ ಔ.ಮಾ. ಘಟಕವು ಚಲನಚಿತ್ರದ ಕಚ್ಚಾ ಸಾಮಗ್ರಿಗಳನ್ನು/ ದೃಶ್ಯದ ತುಣುಕುಗಳನ್ನು ಕತ್ತರಿಸುವ ಮತ್ತು ಜೋಡಿಸಿ, ಉತ್ಪಾದನಾ ಅಗತ್ಯಗಳನ್ನು ಪೂರೈಸುವ ಅರ್ಥಪೂರ್ಣವಾದ ಸರಣಿಯಾಗಿಸುವುದರ ಕುರಿತಾಗಿದೆ. |
| ವ್ಯಾಪ್ತಿ | ಈ ಘಟಕವು ಕೆಳಕಂಡ ಅಂಶಗಳನ್ನು ಹೊಂದಿದೆ<br>* ಉತ್ಪನ್ನವನ್ನು ಸಂಕಲಿಸಲು ಸಿದ್ಧಮಾಡಿಕೊಳ್ಳುವುದು<br>* ಸಂಕಲನ ಮಾಡಿ ಅಂತಿಮ ಉತ್ಪನ್ನವನ್ನು ಸಿದ್ಧಗೊಳಿಸುವುದು |
| **ವ್ಯಾಪ್ತಿಗೆ ಸಂಬಂಧಪಟ್ಟಂತೆ ಕಾರ್ಯಕ್ಷಮತೆ ಮಾನದಂಡ (PC)** | |
| **ಘಟಕಾಂಶ** | **ಕಾರ್ಯಕ್ಷಮತೆ ಮಾನದಂಡ** |
| ಉತ್ಪನ್ನವನ್ನು ಸಂಕಲಿಸಲು ಸಿದ್ಧಮಾಡಿಕೊಳ್ಳುವುದು | ಸ್ಪರ್ಧಾತ್ಮಕವಾಗಿರಲು ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಮಾಡಲು ಕಲಿತಿರಬೇಕು.<br>PC1. ಕಥೆಯ ಹರಿವನ್ನು ಮುಂದಾಗಿ ಊಹಿಸಿ, ಹೇಗಿರಬಹುದೆಂಬುದನ್ನು ಕಲ್ಪಿಸಿ ಮನದಲ್ಲಿಯೇ ಚಿತ್ರಿಸಿಕೊಳ್ಳುವುದು.<br>PC2. ಅಗತ್ಯವಾದ ಕಥಾಹರಿವನ್ನು ಕಟ್ಟಿಕೊಡಲು ಬೇಕಾದ ತುಣುಕುಗಳು, ಧ್ವನಿ, ಸಂಗೀತ, ಸಂಭಾಷಣೆ ಗ್ರಾಫಿಕ್ಸ್ ಹಾಗೂ ವಿಶೇಷ ಪರಿಣಾಮಗಳನ್ನು ಮುಂದಾಗಿಯೇ ಮೌಲ್ಯಮಾಪನ ಮಾಡಿ ಸಿದ್ಧಪಡಿಸಿಟ್ಟುಕೊಳ್ಳುವುದು.<br>PC3. ವೀಡಿಯೋ, ಚಿತ್ರಗಳು ಮತ್ತು ಧ್ವನಿಗಳ ಸಂಗ್ರಹದ ಆಸ್ತಿಯನ್ನು ಜೋಪಾನವಾಗಿ ನಿರ್ವಹಿಸುವುದು |
| ಸಂಕಲನ ಮಾಡಿ ಅಂತಿಮ ಉತ್ಪನ್ನವನ್ನು ಸಿದ್ಧಗೊಳಿಸುವುದು | PC4. ಅತ್ಯಂತ ನಿಖರವಾಗಿ ಹಾಗೂ ಪರಿಣಾಮಕಾರಿಯಾಗಿ ನವೀಕೃತ ದಾಖಲೆಗಳನ್ನು, ಧ್ವನಿ ತುಣುಕುಗಳನ್ನು, ಸೌಂಡ್ ಟ್ರಾಕ್‌ಗಳನ್ನೂ ನಿರ್ವಹಿಸುವುದು.<br>PC5. ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುವಂತೆ ಚಿತ್ರವನ್ನು/ ಉತ್ಪನ್ನ(ಚಲನಚಿತ್ರ)ವನ್ನು ನಿರ್ದಿಷ್ಟವಾದ ನಿರೀಕ್ಷಿತ ಪರಿಣಾಮಗಳನ್ನುಂಟು (ವೇಗ, ನಿರ್ದೇಶನ, ಶೈಲಿ, ಭಾವನೆಗಳು, ಪ್ರಭಾವಶಾಲಿ) ಮಾಡುವ ಹಾಗೆ ಕತ್ತರಿಸಿ, ಜೋಡಿಸಿ, ಸಾಲುಗೊಳಿಸಿ ಸಿದ್ಧಪಡಿಸುವುದು.<br>PC6. ಅಂತಿಮ ಉತ್ಪನ್ನ(ಚಲನಚಿತ್ರ)ದಲ್ಲಿ ನಿರಂತರತೆ, ಸುಲಲಿತ ಹರಿವು/ ಪರಸ್ಪರ ಸಂಬಂಧಗಳು ಇರುವುದನ್ನು ಖಚಿತಪಡಿಸಿಕೊಳ್ಳಿ. |
| **ಜ್ಞಾನ ಮತ್ತು ಅರ್ಥ ಮಾಡಿಕೊಳ್ಳುವಿಕೆ** | |
| ಅ. ಸಂಸ್ಥೆಗೆ ಸಂಬಂಧಿಸಿದಂತೆ (ಸಂಸ್ಥೆಯ/ ಕಂಪನಿಯ ಸ್ವರೂಪ ಮತ್ತು ಕಾರ್ಯವಿಧಾನಗಳು) | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>KA1. ಉತ್ಪನ್ನದ ಕುರಿತಾದ ದೃಷ್ಟಿಕೋನ, ಗುರಿಗಳು, ನಿರೀಕ್ಷಿತ ಫಲಿತಾಂಶ, ಹಂಚಿಕೆ/ ಪ್ರದರ್ಶಕ ವಾಹಿನಿಗಳು<br>KA2. ಅನ್ವಯವಾಗುವ ತಾಂತ್ರಿಕ, ಹಣಕಾಸು ಹಾಗೂ ಸಮಯದ ಮಿತಿಗಳು<br>KA3. ಅಂತಿಮ ಉತ್ಪನ್ನನಿಂದ ನಿರೀಕ್ಷಿತ ಗುಣಮಟ್ಟದ ಮಾನದಂಡಗಳು ಸೇರಿದಂತೆ ಕೆಲಸ–ಉತ್ಪನ್ನದ ಸೃಜನಾತ್ಮಕ ಮತ್ತು ತಾಂತ್ರಿಕ ವಿಶೇಷಣಗಳು.<br>KA4. ಸುವ್ಯಸ್ಥಿತ ಮಾಹಿತಿ ನಿರ್ವಹಣೆ ಮತ್ತು ಕೆಲಸದ ಹರಿವಿನ ವ್ಯವಸ್ಥೆ<br>KA5. ಉತ್ಪಾದನಾ ಹಂತದ ಚಟುವಟಿಕೆಗಳು ಮುಂದುವರೆದಂತೆಲ್ಲಾ ಗುಣಮಟ್ಟ ನಿಯಂತ್ರಣವನ್ನು ನಿರ್ವಹಿಸುವುದು. |
| ಆ. ತಾಂತ್ರಿಕ ಜ್ಞಾನ | KB1. ಸಂಕಲನದ ಸಿದ್ಧಾಂತಗಳು, ಸಂಪ್ರದಾಯಗಳು ಮತ್ತು ಅಂಟಿಸುವ (ಸ್ಲೈಸಿಂಗ್), ಧ್ವನಿವಾಹಿನಿಗೆ ಕತ್ತರಿಸುವ, ಹೊಂದಿಸುವ ಮತ್ತು ಸರಣಿಯಾಗಿಸುವುದನ್ನೂ ಒಳಗೊಂಡಂತೆ ವೀಡಿಯೋ ಸಂಕಲನದ ತಂತ್ರಗಳು.<br>KB2. ಡಬ್ಬಿಂಗ್, ಟ್ರಾಕ್ ಲೇಯಿಂಗ್, ವಿವಿಧ ಫಾರ್ಮ್ಯಾಟುಗಳಲ್ಲಿ ಮಿಕ್ಸಿಂಗ್ ಮಾಡುವುದು ಹಾಗೂ ಧ್ವನಿ ವಿನ್ಯಾಸ ಮಾಡುವುದು.<br>KB3. ಕತ್ತರಿಸುವ, ಕರಗಿಸುವ, ಮಸುಕಾಗಿಸುವ ಹಾಗೂ ಒರೆಸಿದ ಹಾಗೆ ಮಾಡುವುದೂ ಸೇರಿದಂತೆ ದೃಶ್ಯಗಳನ್ನು ಬೆಸೆಯುವ ಮತ್ತು ಹೊಂದಿಸುವ (ಮರ್ಜಿಂಗ್ ಮತ್ತು ಸಿಂಕ್ರನೈಜಿಂಗ್) ತಂತ್ರಗಳು.<br>KB4. ಸಂಕಲನದ ಮೂಲಭೂತ ಅಂಶಗಳು ಮತ್ತು ಮುಂದುವರಿಕೆ/ ಮುಂದುವರಿಸದಿರುವಿಕೆಯ ತತ್ವಗಳು<br>KB5. ಉತ್ಪಾದನೆಗೆ ಅನುಗುಣವಾಗಿ ಕಚ್ಚಾ ಸಾಮಾಗ್ರಿ/ ತುಣುಕುಗಳನ್ನು ಆರಿಸಿಕೊಳ್ಳುವುದು.<br>KB6. ಪ್ರಕಾರಗಳ ಅವಶ್ಯಕತೆಗೆ ಅನುಗುಣವಾಗಿ ತುಣುಕುಗಳ ಅನುಕ್ರಮವನ್ನು ಮರು–ಜೋಡಿಸುವುದು ಹೇಗೆ<br>KB7. ಎವಿಡ್, ಫೈನಲ್ ಕಟ್ ಪ್ರೋ, ಆಫ್ಟರ್ ಎಫೆಕ್ಟ್ಸ್ ಮತ್ತು ಸೌಂಡ್ ಕ್ಲೀನಿಂಗ್ ತರಹದ ತಂತ್ರಾಂಶಗಳನ್ನು ಬಳಸುವುದು ಹೇಗೆ |

| | |
|---|---|
| | KB8. ಯಾವುದೇ ಪೂರ್ವಗ್ರಹವಿಲ್ಲದೆ ವಾಸ್ತವಾಂಶ ಆಧಾರಿತ ಮಾಹಿತಿಗಳನ್ನು ಸಂಕಲಿಸುವುದು ಹೇಗೆ<br>KB9. ನೇರ ಸಂಕಲನವನ್ನು ಮಾಡುವುದು ಹೇಗೆ<br>KB10. ಉತ್ಪಾದನಾ ನಂತರದ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ದೇಶೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಅತ್ಯುತ್ತಮ ಕಾರ್ಯವಿಧಾನಗಳು<br>KB11. ಮಧ್ಯಂತರ ಹಾಗೂ ಅಂತಿಮ ಉತ್ಪನ್ನದ ಕಡತಗಳನ್ನು ಅಗತ್ಯದ ಫಾರ್ಮ್ಯಾಟ್‌ನಲ್ಲಿ ಸೂಕ್ತವಾದ ಹೆಸರು ಕೊಟ್ಟು ಉಳಿಸುವುದು.<br>KB12. ಅಂತಿಮ ಸಿದ್ಧಉತ್ಪನ್ನದ ಗುಣಮಟ್ಟದ ಮೇಲೆ ಫಾರ್ಮ್ಯಾಟಿನ ಪ್ರಭಾವಗಳು<br>KB13. ತೊಡಕುಗಳು/ ಮಿತಿಗಳ ಆಧಾರದ ಮೇಲೆ ಮಾಡಿಕೊಳ್ಳಬೇಕಾದ ಸೂಕ್ತವಾದ ಬದಲಾವಣೆಗಳು/ ಬದಲಿ ಏರ್ಪಾಡುಗಳು<br>KB14. ಅನ್ವಯವಾಗುವ ಆರೋಗ್ಯ ಮತ್ತು ಸುರಕ್ಷತಾ ಮಾರ್ಗದರ್ಶಿ ಸೂತ್ರಗಳು |
| **ಕೌಶಲ್ಯ (ಐಚ್ಛಿಕ)** | |
| ಅ. ತಿರುಳು ಕೌಶಲ್ಯ/ ಸಾಮಾನ್ಯ ಕೌಶಲ್ಯ | **ಬರವಣಿಗೆ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA1. ಸಂಕಲನ ಮಾಡುವಾಗ ಉಪಯೋಗಕ್ಕೆ ಬರುವ ಸಂಕಲನದ ಸೃಜನಾತ್ಮಕ ಸಾಧ್ಯತೆಗಳ ಕುರಿತ, ತುಣುಕುಗಳನ್ನು ಸಜ್ಜುಗೊಳಿಸಲು ಬೇಕಾಗುವ ಟಿಪ್ಪಣಿಗಳು,<br>SA2. ಉತ್ಪಾದನಾ ನಂತರದ ಪ್ರಕ್ರಿಯೆಗಳಾದ ಕಲರ್ ಗ್ರೇಡಿಂಗ್, ಗಣಕಯಂತ್ರದಿಂದ ಸಿದ್ಧಪಡಿಸಿದ ಪರಿಣಾಮಗಳು, ಕಾಂಪೋಸಿಟಿಂಗ್ ಮತ್ತು ರೆಂಡರಿಂಗ್‌ಗಳಿಗೆ ಮಾರ್ಗದರ್ಶಿಯಾಗುವ ಟಿಪ್ಪಣಿಗಳು ಮತ್ತು ವಿಶೇಷಣಗಳ ದಾಖಲೆಗಳು |
| | **ಓದುವ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA3. ಚಿತ್ರಕಥೆಯನ್ನು ಓದಿ ಮನನ ಮಾಡಿಕೊಂಡು ಅಗತ್ಯಗಳನ್ನು ಗುರುತಿಸುವುದು<br>SA4. ಕ್ಯಾಮರಾದಿಂದ ಬಂದ ಕಚ್ಚಾ ದೃಶ್ಯ ತುಣುಕನ್ನು ಒಳಗೊಂಡಂತೆ ಕಚ್ಚಾ ತುಣುಕುಗಳು/ ವಸ್ತುಗಳನ್ನು, ಸಂಭಾಷಣೆ, ಧ್ವನಿ ಪರಿಣಾಮಗಳು, ಗ್ರಾಫಿಕ್ಸ್ ಮತ್ತು ವಿಶೇಷ ಪರಿಣಾಮಗಳನ್ನು ಸಂಗ್ರಹಿಸುವುದು ಮತ್ತು ವೀಕ್ಷಿಸುವುದು<br>SA5. ಉತ್ಪನ್ನದ ತಯಾರಿಕೆಯಲ್ಲಿ ಬಳಸಲು ವಿಭಿನ್ನ ಮೂಲಗಳಿಂದ ಉಲ್ಲೇಖಗಳನ್ನು ಸಂಗ್ರಹಿಸುವುದು<br>SA6. ಅಂತಿಮ ಉತ್ಪನ್ನ(ಚಲನಚಿತ್ರ)ದಲ್ಲಿ ಯಾವ ಅಂಶಗಳನ್ನು ಬಿಂಬಿಸಬೇಕಾಗಿದೆ ಎಂದು ತೀರ್ಮಾನಿಸಲು ಪ್ರಕಾರ, ಭಾಷೆ, ಸಂಸ್ಕೃತಿ, ಯಾವ ವಲಯದಲ್ಲಿ ಉತ್ಪನ್ನ ಸಿದ್ಧವಾಗುತ್ತಿದೆ ಎಂಬುದರ ಬಗ್ಗೆ ಸಂಶೋಧಿಸುವುದು |
| | **ಮಾತುಗಾರಿಕೆ ಸಾಮರ್ಥ್ಯ (ಆಲಿಸುವ ಮತ್ತು ಮಾತಾಡುವ ಕೌಶಲ್ಯ)** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA7. ನಿರ್ದೇಶಕ/ ನಿರ್ಮಾಪಕರಿಂದ ಅನುಸರಿಸಬೇಕಾದ ಸೃಜನಾತ್ಮಕ ದೃಷ್ಟಿಕೋನ, ಸಂಕಲನದ ಅಗತ್ಯಗಳು (ಕಥೆಯನ್ನು ಹೇಗೆ ಮುಟ್ಟಿಸಬೇಕು ಎಂಬುದರ ಬಗ್ಗೆ) ಸೃಜನಾತ್ಮಕ ಹಾಗೂ ತಾಂತ್ರಿಕ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳುವುದು<br>SA8. ಆರಂಭದ ಆವೃತ್ತಿಯೇ ನಿರೀಕ್ಷಿಸಿದ ಪರಿಣಾಮಗಳೊಂದಿಗೆ ಮೂಡಿ ಬರಲು ನಿರ್ದೇಶಕ/ ನಿರ್ಮಾಪಕರ ಜೊತೆಯಲ್ಲಿ ಮಧ್ಯಂತರ/ ಅಂತಿಮ ಕೆಲಸ–ಉತ್ಪನ್ನದ ಬಗ್ಗೆ ಚರ್ಚಿಸಿ ಸುಧಾರಣೆಗಳ ಬಗ್ಗೆ ಸಲಹೆಗಳನ್ನು ಪಡೆದುಕೊಳ್ಳುವುದು<br>SA9. ಉತ್ಪಾದನೆಯ ಚಟುವಟಿಕೆಯನ್ನು ಬೆಂಬಲಿಸಲು ನಿರ್ದೇಶಕರು, ಧ್ವನಿ ತಜ್ಞ (ಸೌಂಡ್ ಇಂಜಿನಿಯರ್), ಸಂಗೀತ ನಿರ್ದೇಶಕರು ಅಥವಾ ಅನಿಮೇಶನ್ ಮಾಡುವವರ ಜೊತೆಯಲ್ಲಿ ಸಹಯೋಗದಿಂದಿರಿ. |
| ಆ. ವೃತ್ತಿಪರ ಕೌಶಲ್ಯ | **ಯೋಜಿಸುವುದು ಮತ್ತು ವ್ಯವಸ್ಥೆಗೊಳಿಸುವುದು** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB1. ಅಗತ್ಯಗಳಿಗೆ ತಕ್ಕಂತೆ ಕೆಲಸಗಳನ್ನು ಯೋಜಿಸಿ ಮತ್ತು ಆದ್ಯತೆ ನೀಡಿ<br>SB2. ಎಲ್ಲಾ ಚಟುವಟಿಕೆಗಳನ್ನು ಸಮಯ ಮಿತಿಯ ಗಡುವು ಮೀರದಂತೆ ಸಾಧಿಸಿ<br>SB3. ವೇಗವಾಗಿ ಚುರುಕಾಗಿ ಕೆಲಸ ನಡೆಯುವ ವಾತಾವರಣದಲ್ಲಿ ಚೆನ್ನಾಗಿ ಕೆಲಸ ಮಾಡಿ |


| | |
|---|---|
| | **ಸಮಸ್ಯೆ ಬಗೆಹರಿಸುವಿಕೆ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB4. ಮಧ್ಯಂತರ/ ಅಂತಿಮ ಕೆಲಸ–ಉತ್ಪನ್ನ(ಚಲನಚಿತ್ರ)ದ ಕುರಿತಾಗಿ ನೀಡಲಾದ ಸಲಹೆ/ಟೀಕೆಗಳನ್ನು ಪರಿಗಣಿಸಿ ಸೂಕ್ತ ಬದಲಾವಣೆಗಳನ್ನು ಮಾಡುವುದು.<br>SB5. ಉಳಿದವರಿಗೆ ಸಮಸ್ಯೆ ಬಗೆಹರಿಸಲು ನೆರವು ನೀಡುವ, ಕೆಲಸದ ಹರಿವಿನ ಮೇಲೆ ಸಕಾರಾತ್ಮಕ ಪ್ರಭಾವಗಳನ್ನು ಹೊಂದಿದ ಪ್ರಗತಿ, ಗುಣಮಟ್ಟ ಅಥವಾ ಕಾರ್ಯವಿಧಾನಗಳಿಗೆ ಸಂಬಂಧಿಸಿದ ಅಂಶಗಳಿದ್ದರೆ ಹಂಚಿಕೊಳ್ಳಿ. |
| | **ವಿಶ್ಲೇಷಣಾ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB6. ಸಣ್ಣ ವಿವರಗಳನ್ನೂ ಗಮನಿಸುವ ತೀಕ್ಷ್ಣ ನೋಟ ಮತ್ತು ಅಂತಿಮ ಉತ್ಪನ್ನದ ಬಣ್ಣ ಹೊಂದಿಕೆ, ವಿಎಫ಼್ಎಕ್ಸ್ ಭಾಗಗಳ ಬಗ್ಗೆ ತಂತ್ರಾಂಶ ಸಾಮರ್ಥ್ಯಗಳ ಬಗ್ಗೆ ಸೌಂದರ್ಯ ಪ್ರಜ್ಞೆಯನ್ನು ಹೊಂದಿರಿ. |
| | **ವಿಮರ್ಶಾತ್ಮಕ ಚಿಂತನೆ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB7. ನಿಮ್ಮ ಕೆಲಸವು ನಿರೀಕ್ಷಿತ ಗುಣಮಟ್ಟ ಪ್ರಮಾಣಕ್ಕೆ ಅನುಗುಣವಾಗಿರುವುದನ್ನು ಆಗ್ಗಾಗ್ಗೆ ಸ್ವಯಂ ಮೌಲ್ಯಮಾಪನದ ಮೂಲಕ ಖಚಿತಪಡಿಸಿಕೊಳ್ಳಿ<br>SB8. ಕಥೆಯನ್ನು ಪರಿಣಾಮಕಾರಿಯಾಗಿ ಹೇಳುವ ಅಥವಾ ಸಮಸ್ಯೆಯನ್ನು ಬಗೆಹರಿಸುವ ಅಥವಾ ಉತ್ಪನ್ನದ ಗುಣಮಟ್ಟ ಏರಿಸಲು ನೆರವಾಗಬಲ್ಲ ಹಾಗೆ ಸಂಕಲನದಲ್ಲಿ ನಾವೀನ್ಯತೆಯನ್ನು ಅಭಿವೃದ್ಧಿಪಡಿಸಿ.<br>SB9. ಕಥೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಹೇಳಲು ಸಾಧ್ಯವಾಗುವ ಅಥವಾ ಆರ್ಥಿಕ ಹೊರೆಯಾಗದ ಅಗತ್ಯ ಬದಲಾವಣೆಗಳನ್ನು ಸೂಚಿಸುವುದು. |
| | **ನಿರ್ಣಯ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB9. ಕಥೆಯನ್ನು ಸುಲಲಿತವಾಗಿ ಹೇಳಲು ಸಹಾಯವಾಗುವ, ಇದುವರೆವಿಗೆ ಯೋಚಿಸಿರದ ಉಪಾಯಗಳನ್ನು ಅಭಿವೃದ್ಧಿಪಡಿಸಿ.<br>SB10. ಕಥೆಯಲ್ಲಿನ ಅವುಗಳ ಪಾತ್ರಕ್ಕಾಗಿ ದೃಶ್ಯಗಳನ್ನು ಮತ್ತು ಸನ್ನಿವೇಶಗಳನ್ನು ವಿಮರ್ಶಾತ್ಮಕವಾಗಿ ತೀಕ್ಷ್ಣವಾಗಿ ನೋಡಿ, ತಾಂತ್ರಿಕ ಗುಣಮಟ್ಟದ ಬಗ್ಗೆ ಸೂಕ್ತವಾಗಿ ತೀರ್ಮಾನಿಸುವುದು. |
| | **ಗ್ರಾಹಕ ಕೇಂದ್ರಿತ** |
| | SB11. ಗ್ರಾಹಕ/ ಕಕ್ಷಿದಾರರ ಜೊತೆಯಲ್ಲಿ ನಿಕಟವಾಗಿ ಕೆಲಸ ಮಾಡಿ ಚಿತ್ರದ ಮೂಲಕ ತಲುಪಿಸಲು ಮುಂದಾಗಿರುವ ಸಂದೇಶ ಅಥವಾ ಕಲಾತ್ಮಕತೆಯ ಗುರಿಗಳ ಬಗ್ಗೆ ಅರ್ಥಮಾಡಿಕೊಳ್ಳಿ<br>SB12. ಪ್ರತಿಕ್ರಿಯೆ/ ಟೀಕೆ/ ಅನಿಸಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಮತ್ತು ಅಗತ್ಯ ಸುಧಾರಣೆಗಳನ್ನು ಹೇಗೆ ಮಾಡಬೇಕೆಂದು ಗುರುತಿಸಿ |

## ರಾ.ಔ.ಮಾ ದ ಆವೃತ್ತಿ ನಿಯಂತ್ರಣ

| | | | |
|---|---|---|---|
| ರಾ.ಔ.ಮಾ ಸಂಕೇತ | MES /N1403 | | |
| ಮನ್ನಣೆ: | ಇನ್ನೂ ತೀರ್ಮಾನಿಸಬೇಕಿದೆ | ಆವೃತ್ತಿ ಸಂಖ್ಯೆ: | 1.0 |
| ಕೈಗಾರಿಕೆ | ಮಾಧ್ಯಮ ಮತ್ತು ಮನರಂಜನೆ | ಕರಡು ಪ್ರತಿ ದಿನಾಂಕ: | 16/11/2014 |
| ಕೈಗಾರಿಕೆಯ ಉಪ ವಲಯ | ಸಿನಿಮಾ, ಟೆಲಿವಿಷನ್, ಅನಿಮೇಶನ್ ಮತ್ತು ಜಾಹಿರಾತು | ಅಂತಿಮ ಪರಿಷ್ಕರಣೆ ದಿನಾಂಕ: | 20/03/2018 |
| ವೃತ್ತಿ | ಉತ್ಪಾದನಾ ನಂತರದ ಚಟುವಟಿಕೆ | ಮುಂದಿನ ಪರಿಶೀಲನೆ ದಿನಾಂಕ: | 20/06/2021 |



# ರಾಷ್ಟ್ರೀಯ ಔದ್ಯೋಗಿಕ ಮಾನದಂಡ



**ಸ್ಥೂಲ ನೋಟ**


**ಈ ಘಟಕವು ಆರೋಗ್ಯಕರ, ಸುರಕ್ಷಿತ ಹಾಗೂ ಸುಭದ್ರವಾದ ಕೆಲಸದ ವಾತಾವರಣವನ್ನು ನಿರ್ವಹಿಸಲು ನೀಡಬೇಕಾದ ಕೊಡುಗೆಯ ಕುರಿತಾಗಿದೆ.**

| ಘಟಕ ಸಂಕೇತ | MES/N0104 |
|---|---|
| ಘಟಕದ ಹೆಸರು (ಕಾರ್ಯಭಾರ) | ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು |
| ವಿವರಣೆ | ಈ ಔ.ಮಾ. ಘಟಕವು ಆರೋಗ್ಯಕರ, ಸುರಕ್ಷಿತ ಹಾಗೂ ಸುಭದ್ರವಾದ ಕೆಲಸದ ಸ್ಥಳವನ್ನು ನಿರ್ವಹಿಸಲು ನೀಡಬೇಕಾದ ಕೊಡುಗೆಯ ಕುರಿತಾಗಿದೆ. |
| ವ್ಯಾಪ್ತಿ | ಈ ಘಟಕವು ಕೆಳಕಂಡ ಅಂಶಗಳನ್ನು ಹೊಂದಿದೆ<br>* ಕೆಲಸದ ಸ್ಥಳಗಳಲ್ಲಿ ಇರಬಹುದಾದ ಆರೋಗ್ಯ, ಸುರಕ್ಷತೆ ಹಾಗೂ ಭದ್ರತೆಗೆ ಸಂಬಂಧಿಸಿದ ಸಂಭವನೀಯ ಅಪಾಯಗಳನ್ನು ಅರ್ಥ ಮಾಡಿಕೊಳ್ಳುವುದು<br>* ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಯ ನಿರ್ವಹಣೆಯ ಹೊಣೆಗಾರಿಕೆ ಹೊಂದಿರುವ ಅಧಿಕಾರಿಗಳನ್ನು ಮತ್ತು ಸಂಪನ್ಮೂಲಗಳನ್ನು ಗುರುತಿಸುವುದು<br>* ಸಂಭವನೀಯ ಅಪಾಯಗಳನ್ನು ಗುರುತಿಸುವುದು ಮತ್ತು ವರದಿ ಮಾಡುವುದು<br>* ತುರ್ತು ಸಂದರ್ಭಗಳಲ್ಲಿ ಗೊತ್ತು ಮಾಡಿದ ಕಾರ್ಯವಿಧಾನಗಳಿಗೆ ಬದ್ಧರಾಗಿರುವುದು |
| **ವ್ಯಾಪ್ತಿಗೆ ಸಂಬಂಧಪಟ್ಟಂತೆ ಕಾರ್ಯಕ್ಷಮತೆ ಮಾನದಂಡ** | |
| **ಘಟಕಾಂಶ** | **ಕಾರ್ಯಕ್ಷಮತೆ ಮಾನದಂಡ** |
| ಕೆಲಸದ ಸ್ಥಳಗಳಲ್ಲಿ ಇರಬಹುದಾದ ಆರೋಗ್ಯ, ಸುರಕ್ಷತೆ ಹಾಗೂ ಭದ್ರತೆಗೆ ಸಂಬಂಧಿಸಿದ ಸಂಭವನೀಯ ಅಪಾಯಗಳನ್ನು ಅರ್ಥ ಮಾಡಿಕೊಳ್ಳುವುದು | ಸ್ಪರ್ಧಾತ್ಮಕವಾಗಿರಲು ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಮಾಡಲು ಕಲಿತಿರಬೇಕು<br>PC1. ಸಂಸ್ಥೆಯ ಪ್ರಸ್ತುತ ಆರೋಗ್ಯ, ಸುರಕ್ಷತೆ ಹಾಗೂ ಭದ್ರತಾ ನಿಯಮಗಳನ್ನು ಅರ್ಥ ಮಾಡಿಕೊಂಡು ಅದಕ್ಕೆ ಬದ್ಧರಾಗಿ ನಡೆಯುವುದು<br>PC2. ನಿಮ್ಮ ಕಾರ್ಯಚಟುವಟಿಕೆಗೆ ಸಂಬಂಧಪಟ್ಟ ಎಲ್ಲಾ ಸುರಕ್ಷತಾ ಕಾರ್ಯವಿಧಾನಗಳನ್ನು ಅರ್ಥಮಾಡಿಕೊಳ್ಳುವುದು<br>PC3. ಅನಾರೋಗ್ಯ, ಅಪಘಾತಗಳು, ಬೆಂಕಿ ಆಕಸ್ಮಿಕ ಮೊದಲಾದ ಸ್ಥಳಾಂತರವನ್ನು ಬೇಡುವ ತುರ್ತುಸಂದರ್ಭಗಳನ್ನೂ ಒಳಗೊಂಡಂತೆ ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರವು ರೂಪಿಸಿರುವ ನೀತಿ ನಿಯಮಗಳನ್ನು ಅರ್ಥ ಮಾಡಿಕೊಳ್ಳುವುದು<br>PC4. ತುರ್ತು ಸಂದರ್ಭಗಳಲ್ಲಿ ಸಂಪರ್ಕ ಮಾಡಬೇಕಾದ ಅಧಿಕಾರಿಗಳೂ ಸೇರಿದಂತೆ ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಯ ನಿರ್ವಹಣೆಯ ಹೊಣೆಗಾರಿಕೆ ಹೊಂದಿರುವ ಅಧಿಕಾರಿಗಳನ್ನು ಗುರುತಿಸಿ |
| ಆರೋಗ್ಯ ಮತ್ತು ಸುರಕ್ಷತೆಯ ಹೊಣೆಗಾರಿಕೆ ವ್ಯಕ್ತಿಗಳನ್ನು ಮತ್ತು ಸಂಪನ್ಮೂಲಗಳನ್ನು ಗುರುತಿಸುವುದು | PC5. ಮೆಟ್ಟಿಲುಗಳು, ಅಗ್ನಿಶಾಮಕ ವಾರ್ಡನ್ ಇರುವ ಜಾಗ, ಮೊದಲಾರೈಕೆ ಮತ್ತು ವೈದ್ಯಕೀಯ ನೆರವು ವಿಭಾಗಗಳೂ ಸೇರಿದಂತೆ ಎಲ್ಲೆಡೆಯಿರುವ ಸುರಕ್ಷತಾ ಸೂಚನೆಗಳನ್ನು ಗುರುತಿಸಿ.<br>PC6. ನಿಮ್ಮ ಕೆಲಸದ ಸ್ಥಳದಲ್ಲಿ ನಿಮಗಾಗಲೀ ಅಥವಾ ಇನ್ನುಳಿದವರಿಗಾಗಲೀ ಸಂಭವನೀಯ ಅಪಾಯ ಉಂಟುಮಾಡುವ ಸನ್ನಿವೇಶ ಮತ್ತು ಸ್ಥಿತಿಗಳನ್ನು ಗುರುತಿಸಿ. |
| ಸಂಭವನೀಯ ಅಪಾಯಗಳನ್ನು ಗುರುತಿಸುವುದು ಮತ್ತು ವರದಿ ಮಾಡುವುದು | PC7. ಸೂಕ್ತ ಮುನ್ನೆಚ್ಚರಿಕೆ ಕ್ರಮಗಳ ನೆರವಿನಿಂದ ನಿಮ್ಮ ಕೆಲಸದ ಸ್ಥಳದಲ್ಲಿ ನಿಮ್ಮ ಮತ್ತು ಇತರರ ಸುರಕ್ಷತೆಯನ್ನು ಖಾತ್ರಿ ಪಡಿಸಿಕೊಳ್ಳಿ<br>PC8. ಆರೋಗ್ಯ, ಸುರಕ್ಷತೆ ಹಾಗೂ ಭದ್ರತಾ ವ್ಯವಸ್ಥೆಗಳನ್ನು ಸದಾಕಾಲ ಸುಧಾರಿಸುವ ಸಲಹೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡುವುದನ್ನು ಗಮನದಲ್ಲಿರಿಸಿ<br>PC9. ನಿಮ್ಮ ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಅನಾರೋಗ್ಯ, ಅಪಘಾತ, ಬೆಂಕಿ ಆಕಸ್ಮಿಕ ಮೊದಲಾದ ಸಂಭವನೀಯ ಅಪಾಯಗಳನ್ನು ಗುರುತಿಸಿ, ಸೂಕ್ತ ಮುನ್ನೆಚ್ಚರಿಕೆ ಕ್ರಮಗಳ ಮೂಲಕ ನಿವಾರಿಸಿ<br>PC10.ನಿಮ್ಮ ಕೆಲಸದ ವ್ಯಾಪ್ತಿಯ ಹೊರಗೆ ಯಾವುದಾದರೂ ಅಪಾಯಕಾರಿ ಸನ್ನಿವೇಶಗಳು ಕಂಡುಬಂದರೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತನ್ನಿ ಮತ್ತು ಆ ಸ್ಥಳದಲ್ಲಿನ ಇನ್ನಿತರನ್ನು ಜಾಗೃತಗೊಳಿಸಿ. |
| ತುರ್ತು ಸಂದರ್ಭಗಳಲ್ಲಿ ಗೊತ್ತು ಮಾಡಿದ ಕಾರ್ಯವಿಧಾನಗಳಿಗೆ ಬದ್ಧರಾಗಿರುವುದು | PC11.ಅನಾರೋಗ್ಯ, ಬೆಂಕಿ ಅಪಘಾತಗಳು ಹಾಗೂ ಇನ್ನಿತರ ನೈಸರ್ಗಿಕ ವಿಕೋಪಗಳ ಸಂದರ್ಭಗಳಲ್ಲಿ ಸಂಸ್ಥೆಯು ಗೊತ್ತುಮಾಡಿದ ತುರ್ತು ಸಂದರ್ಭದ ಕಾರ್ಯವಿಧಾನಗಳನ್ನು ಪಾಲಿಸಿ.<br>PC12.ನಿಮ್ಮ ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಅನಾರೋಗ್ಯ, ಅಪಘಾತ, ಬೆಂಕಿ ಆಕಸ್ಮಿಕ ಮೊದಲಾದ ಸಂಭವನೀಯ ಅಪಾಯಗಳನ್ನು ಗುರುತಿಸಿ, ಸೂಕ್ತ ಮುನ್ನೆಚ್ಚರಿಕೆ ಕ್ರಮಗಳ ಮೂಲಕ ನಿವಾರಿಸಿ |
| **ಜ್ಞಾನ ಮತ್ತು ಅರ್ಥ ಮಾಡಿಕೊಳ್ಳುವಿಕೆ** | |
| ಅ. ಸಂಸ್ಥೆಯ ಸಂದರ್ಭ (ಸಂಸ್ಥೆಯ/ ಕಂಪನಿಯ ಸ್ವರೂಪ ಮತ್ತು ಕಾರ್ಯವಿಧಾನಗಳ ತಿಳುವಳಿಕೆ) | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>KA1. ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಸಂಸ್ಥೆಯು ಹೊಂದಿರುವ ಪ್ರಮಾಣಗಳು ಹಾಗೂ ನೀತಿನಿಯಮಗಳು<br>KA2. ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರವು ರೂಪಿಸಿರುವ ಪ್ರಮಾಣಗಳು, ನೀತಿ ನಿಯಮಗಳು ಮತ್ತು ತುರ್ತು ಸಂದರ್ಭದ ಕಾರ್ಯವಿಧಾನಗಳು<br>KA3. ಅಪಾಯಗಳನ್ನು ಎದುರಿಸುವಾಗ ಅಧಿಕಾರ ವ್ಯಾಪ್ತಿಯ ಮಿತಿಗಳು.<br>KA4. ಕೆಲಸದ ಸ್ಥಳದಲ್ಲಿ ಉನ್ನತಮಟ್ಟದ ಆರೋಗ್ಯ ಮತ್ತು ಸುರಕ್ಷತೆಗಳನ್ನು ಕಾಪಾಡಿಕೊಳ್ಳುವುದರ ಮಹತ್ವ |

| | |
|---|---|
| ಆ. ತಾಂತ್ರಿಕ ಜ್ಞಾನ | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>KB1. ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದ ವಿಭಿನ್ನ ಅಪಾಯಗಳು.<br>KB2. ತಮ್ಮ ಕೆಲಸದ ಕಾರ್ಯಭಾರದ ಸುರಕ್ಷತಾ ಕಾರ್ಯಚಟುವಟಿಕೆಗಳು.<br>KB3. ಅಪಾಯಗಳನ್ನು ನಿಭಾಯಿಸಲು ತುರ್ತು ಸ್ಥಳಾಂತರದ ಕಾರ್ಯವಿಧಾನಗಳು ಹಾಗೂ ಇನ್ನಿತರ ಏರ್ಪಾಟುಗಳು.<br>KB4. ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಯ ಹೊಣೆ ಹೊತ್ತ ವ್ಯಕ್ತಿ ಹೆಸರು ಮತ್ತು ಸಂಪರ್ಕ ಸಂಖ್ಯೆಗಳು<br>KB5. ಅಗತ್ಯವಿದ್ದಾಗ ಹೇಗೆ ವೈದ್ಯಕೀಯ ನೆರವು ಮತ್ತಿತರ ತುರ್ತು ಸೇವೆಗಳನ್ನು ಕರೆಯುವುದು.<br>KB6. ಯಂತ್ರಗಳು, ವ್ಯವಸ್ಥೆಗಳು ಹಾಗೂ ಉಪಕರಣಗಳನ್ನು ನಿರ್ವಹಣೆ ಮಾಡುವಾಗ ಉತ್ಪಾದಕರು ಒದಗಿಸಿದ ಸೂಚನಾ ಕೈಪಿಡಿಗಳನ್ನು ಬಳಸುವುದು |
| **ಕೌಶಲ್ಯ (ಐಚ್ಛಿಕ)** | |
| ಅ. ತಿರುಳು ಕೌಶಲ್ಯ/ ಸಾಮಾನ್ಯ ಕೌಶಲ್ಯ | **ಬರವಣಿಗೆ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA1. ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಸಂಬಂಧಪಟ್ಟವರಿಗೆ ಹೇಗೆ ಬರೆದು ಸಲಹೆ ಸೂಚನೆ ಪ್ರತಿಕ್ರಿಯೆಗಳನ್ನು ನೀಡುವುದು.<br>SA2. ಹೇಗೆ ಸಂಭವನೀಯ ಅಪಾಯಗಳ ಬಗ್ಗೆ ಸಂಬಂಧಪಟ್ಟವರಿಗೆ ಬರೆದು ಗಮನಸೆಳೆಯುವುದು ಮತ್ತು ಅಪಾಯಗಳ ವರದಿಗಳನ್ನು ಬರೆಯುವುದು |
| | **ಓದುವ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA3. ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದ ಎಲ್ಲಾ ಸೂಚನೆಗಳನ್ನು, ನಿಯಮಗಳನ್ನು, ಕಾರ್ಯವಿಧಾನಗಳನ್ನು ಮತ್ತು ಪ್ರಮಾಣಗಳನ್ನು ಓದಿ |
| | **ಮಾತುಗಾರಿಕೆ ಸಾಮರ್ಥ್ಯ (ಆಲಿಸುವ ಮತ್ತು ಮಾತಾಡುವ ಕೌಶಲ್ಯ)** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SA4. ಸಂಭವನೀಯ ಅಪಾಯಗಳನ್ನು ಬೆಳಕಿಗೆ ತನ್ನಿ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ವರದಿ ಮಾಡುವುದು<br>SA5. ಸಂಬಂಧಿಸಿದ ಪ್ರತಿಯೊಬ್ಬರೊಡನೆಯೂ ಮಾತುಕತೆಯಾಡಿ, ಆಲಿಸಿ ಮತ್ತು ಸಂವಹನ ಮಾಡಿ. |
| ಆ. ವೃತ್ತಿಪರ ಕೌಶಲ್ಯ | **ನಿರ್ಣಯ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB1. ಯೋಜನೆ ಅಥವಾ ಚಟುವಟಿಕೆಗಳ ಬಗ್ಗೆ ಸೂಕ್ತ ತೀರ್ಮಾನಗಳನ್ನು ಕೈಗೊಳ್ಳುವುದು. |
| | **ಯೋಜಿಸುವುದು ಮತ್ತು ವ್ಯವಸ್ಥೆಗೊಳಿಸುವುದು** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB2. ನಿಮ್ಮ ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಎಲ್ಲಾ ಸಂಭವನೀಯ ಅಪಾಯಗಳನ್ನು ಎದುರಿಸಲು ಸೂಕ್ತ ಯೋಜನೆಗಳನ್ನು ಮಾಡುವುದು ಮತ್ತು ಅಗತ್ಯ ವ್ಯಕ್ತಿಗಳು ಮತ್ತು ಸಂಪನ್ಮೂಲಗಳನ್ನು ವ್ಯವಸ್ಥೆಗೊಳಿಸುವುದು |
| | **ಸಮಸ್ಯೆ ಬಗೆಹರಿಸುವಿಕೆ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB3. ಸಮಸ್ಯೆ ಪರಿಹಾರದ ಬೇರೆ ಬೇರೆ ವಿಧಾನಗಳನ್ನು ಆಯಾ ಸಂದರ್ಭಗಳಿಗೆ ತಕ್ಕಂತೆ ಸೂಕ್ತವಾಗಿ ಅನ್ವಯಿಸಿ. |
| | **ವಿಮರ್ಶಾತ್ಮಕ ಚಿಂತನೆ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB4. ನಿಮ್ಮ ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಸಂಭವನೀಯ ಅಪಾಯಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ವ್ಯಾಪ್ತಿಯನ್ನು ಮೀರಿ ಯಾವುದಾದರೂ ಅಪಾಯಕಾರಿ ಸನ್ನಿವೇಶಗಳು ಕಂಡುಬಂದರೆ ಕೂಡಲೇ ವರದಿ ಮಾಡಿ<br>SB5. ವಿಭಿನ್ನ ಸಂದರ್ಭಗಳಿಗೆ ತಕ್ಕಂತೆ ಸಮತೋಲನಾತ್ಮಕ ನಿರ್ಣಯಗಳನ್ನು ಅನ್ವಯಿಸುವುದು. |
| | **ಗ್ರಾಹಕ ಕೇಂದ್ರಿತ** |
| | SB6. ಕಾಲೇಜುಗಳು ಮತ್ತು ಗ್ರಾಹಕರ ಜೊತೆಯಲ್ಲಿ ಸಕಾರಾತ್ಮಕವಾದ ಪರಿಣಾಮಕಾರಿ ಬಾಂಧವ್ಯಗಳನ್ನು ಅಭಿವೃದ್ಧಿಪಡಿಸಿಕೊಂಡು ನಿರ್ವಹಿಸುವುದು |
| | **ವಿಶ್ಲೇಷಣಾ ಸಾಮರ್ಥ್ಯ** |
| | ಶಿಕ್ಷಣಾರ್ಥಿಯು ಈ ಕೆಳಗಿನ ವಿಷಯಗಳನ್ನು ಹೇಗೆ ಮಾಡಬೇಕೆಂಬ ಬಗ್ಗೆ ತಿಳಿದು ಅರ್ಥ ಮಾಡಿಕೊಂಡಿರಬೇಕು:<br>SB7. ಮಾಹಿತಿ ಮತ್ತು ಚಟುವಟಿಕೆಗಳ ವಿಶ್ಲೇಷಣೆ. |

## ರಾ.ಔ.ಮಾ ದ ಆವೃತ್ತಿ ನಿಯಂತ್ರಣ

| | | | |
|---|---|---|---|
| ರಾ.ಔ.ಮಾ ಸಂಕೇತ | MES/N0104 | | |
| ಮನ್ನಣೆ: | ಇನ್ನೂ ತೀರ್ಮಾನಿಸಬೇಕಿದೆ | ಆವೃತ್ತಿ ಸಂಖ್ಯೆ: | 1.0 |
| ವಲಯ | ಮಾಧ್ಯಮ ಮತ್ತು ಮನರಂಜನೆ | ಕರಡು ಪ್ರತಿ ದಿನಾಂಕ: | 16/11/2014 |
| ಉಪ ವಲಯ | ಸಿನಿಮಾ, ಟೆಲಿವಿಷನ್, ಅನಿಮೇಶನ್ ಮತ್ತು ಜಾಹಿರಾತು | ಅಂತಿಮ ಪರಿಷ್ಕರಣೆ ದಿನಾಂಕ: | 20/03/2018 |
| ವೃತ್ತಿ | ಉತ್ಪಾದನಾ ನಂತರದ ಚಟುವಟಿಕೆ | ಮುಂದಿನ ಪರಿಶೀಲನೆ ದಿನಾಂಕ: | 20/06/2021 |



# ಅನುಬಂಧ


## ವಿದ್ಯಾರ್ಹತೆ ಪ್ಯಾಕ್ ಮತ್ತು ರಾಷ್ಟ್ರೀಯ ಔದ್ಯೋಗಿಕ ಮಾನದಂಡಗಳನ್ನು ಹೆಸರಿಸುವ ಬಗೆ

### ವಿದ್ಯಾರ್ಹತೆ ಪ್ಯಾಕ್




### ಔದ್ಯೋಗಿಕ ಪ್ರಮಾಣಗಳು

**N ಜೊತೆಗೆ ಔದ್ಯೋಗಿಕ ಮಾನದಂಡದ ಉದಾಹರಣೆ**



ಈ ಕೆಳಗಿನ ಸಂಕ್ಷಿಪ್ತ ಪದ/ ಸಂಕೇತಗಳನ್ನು ಮೇಲೆ ಹೆಸರಿಸಲು ಬಳಸಲಾಗಿದೆ

| ಉಪ ವಲಯ | ಉದ್ಯೋಗ ಸಂಖ್ಯೆಗಳ ವ್ಯಾಪ್ತಿ |
|---|---|
| ಸಿನಿಮಾ | 01-30 |
| ದೂರದರ್ಶನ | 31-40 |
| ಮುದ್ರಣ | 41-45 |
| ಅನಿಮೇಶನ್ | 46-55 |
| ಗೇಮಿಂಗ್ (ಆಟಗಳು) | 56-65 |
| ಬಾನುಲಿ (ರೇಡಿಯೋ) | 66-70 |
| ಡಿಜಿಟಲ್ | 71-80 |
| ಓಓಎಚ್ | 81-90 |
| ಜಾಹೀರಾತು | 91-99 |

| ಅನುಕ್ರಮ | ವಿವರ | ಉದಾಹರಣೆ |
|---|---|---|
| ಮೂರು ಅಕ್ಷರಗಳು | ಮಾಧ್ಯಮ ಮತ್ತು ಮನರಂಜನೆ | MES |
| ಓರೆ ಗೆರೆ | / | / |
| ಮುಂದಿನ ಅಕ್ಷರ | ಅರ್ಹತೆ ಪ್ಯಾಕ್ ಅಥವಾ ರಾ.ಔ.ಮಾ. | Q |
| ನಂತರದ ಎರಡು ಅಂಕೆಗಳು | ಉತ್ಪಾದನಾ ನಂತರ | 14 |
| ನಂತರದ ಎರಡು ಅಂಕೆಗಳು | ಅ.ಪ್ಯಾಕ್. ಸಂಖ್ಯೆ | 01 |

# ತರಬೇತಿ ಪಡೆಯುವವರ ಮೌಲ್ಯಮಾಪನದ ಮಾನದಂಡಗಳು

**ಕೆಲಸದ ಕಾರ್ಯಭಾರ: ಸಂಕಲನಕಾರ**
**ಅರ್ಹತೆ ಪ್ಯಾಕ್: MES/Q1401**
**ವಲಯ ಕೌಶಲ್ಯ ಸಮಿತಿ : ಮಾಧ್ಯಮ ಮತ್ತು ಮನರಂಜನೆ**

| ಮೌಲ್ಯಮಾಪನ ಮಾರ್ಗದರ್ಶಿ ಸೂತ್ರಗಳು |
|---|
| 1. ಪ್ರತಿಯೊಂದು ಅರ್ಹತೆ ಪ್ಯಾಕ್‌ನ ಮೌಲ್ಯಮಾಪನ ಮಾನದಂಡವನ್ನು ವಲಯ ಔಶಲ್ಯ ಸಮಿತಿಯು ಸಿದ್ಧಪಡಿಸುತ್ತದೆ. ಪ್ರತಿಯೊಂದು ಕಾರ್ಯಕ್ಷಮತೆ ಮಾನದಂಡಕ್ಕೂ ಅವುಗಳು ರಾ.ಔ.ಮಾ ದಲ್ಲಿ ಹೊಂದಿರುವ ಮಹತ್ವದ ಆಧಾರದ ಮೇಲೆ ಅಂಕಗಳ ಅನುಪಾತವನ್ನು ತೀರ್ಮಾನಿಸಲಾಗುತ್ತದೆ. ವಲಯ ಕೌಶಲ್ಯ ಸಮಿತಿಯು ಕೂಡಾ ಪ್ರತಿಯೊಂದು ಕಾರ್ಯಕ್ಷಮತೆ ಮಾನದಂಡಕ್ಕೂ ಅಂಕಗಳ ಅನುಪಾತವನ್ನು ಗೊತ್ತುಮಾಡುತ್ತದೆ. |
| 2. ಮೌಲ್ಯಮಾಪನವು ವಲಯ ಕೌಶಲ್ಯ ಸಮಿತಿ (ಎಸ್‌ಎಸ್‌ಸಿ) ತೀರ್ಮಾನಿಸಿದ ಜ್ಞಾನ ಕೋಶಾಧಾರಿತ ಪ್ರಶ್ನೆಗಳ ಆಧಾರದ ಮೇರೆಗೆ ನಡೆಯುತ್ತದೆ. |
| 3. ಖಾಸಗಿ ಮೌಲ್ಯಮಾಪನ ಸಂಸ್ಥೆಗಳು ಪರೀಕ್ಷಾ ಕೇಂದ್ರದಲ್ಲಿ/ ತರಬೇತಿ ಕೇಂದ್ರದಲ್ಲಿ ಬೋಧನೆಗೆ ಸಂಬಂಧಿಸಿದಂತೆ ಪ್ರತಿಯೊಬ್ಬ ಶಿಕ್ಷಾರ್ಥಿಗೂ ಪ್ರತ್ಯೇಕವಾದ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುತ್ತದೆ. |
| 4. ಖಾಸಗಿ ಮೌಲ್ಯಮಾಪನ ಸಂಸ್ಥೆಗಳು ಪರೀಕ್ಷಾ ಕೇಂದ್ರದಲ್ಲಿ/ ತರಬೇತಿ ಕೇಂದ್ರದಲ್ಲಿ ಪ್ರತಿಯೊಬ್ಬ ಶಿಕ್ಷಾರ್ಥಿಗೂ ಪ್ರತ್ಯೇಕವಾದ ಕೌಶಲ್ಯ ಮೌಲ್ಯಮಾಪನವನ್ನು ಕೈಗೊಳ್ಳುತ್ತವೆ. (ಕೆಳಗಿನ ಮೌಲ್ಯಮಾಪನ ಮಾನದಂಡಗಳಿಗೆ ಅನುಗುಣವಾಗಿ) |
| 5. ಅರ್ಹತೆ ಪ್ಯಾಕ್‌ನ್ನು ಉತ್ತೀರ್ಣರಾಗಲು ಪ್ರತಿಯೊಬ್ಬ ಶಿಕ್ಷಾರ್ಥಿಯೂ ರಾ.ಔ.ಮಾದ ಎಲ್ಲಾ ವಿಭಾಗಗಳ ಮೊತ್ತವಾಗಿ ಕನಿಷ್ಟ 70%ರಷ್ಟು ಅಂಕಿಗಳನ್ನು ಪಡೆದಿರತಕ್ಕದ್ದು. |
| 6. ಕೆಲವು ಸಂಖ್ಯೆಯ ರಾ.ಔ.ಮಾ.ಗಳಲ್ಲಿ ಮಾತ್ರಾ ಉತ್ತೀರ್ಣರಾದವರು ಮತ್ತೊಮ್ಮೆ ಇನ್ನುಳಿದ ರಾ.ಔ.ಮಾ.ಗಳ ಮರುಮೌಲ್ಯಮಾಪನಕ್ಕೆ ಒಳಪಟ್ಟು/ ಪರೀಕ್ಷೆ ತೆಗೆದುಕೊಂಡು ಅರ್ಹತೆ ಪ್ಯಾಕ್‌ಅನ್ನು ಉತ್ತೀರ್ಣರಾಗಬಹುದು. |

| ಮೌಲ್ಯಮಾಪನದ ಫಲಿತಾಂಶಗಳು | ಕಾರ್ಯಕ್ಷಮತೆ ಮಾನದಂಡ | ಅಂಕೆಗಳ ಹಂಚಿಕೆ | | | |
|---|---|---|---|---|---|
| | | ಒಟ್ಟು ಅಂಕೆಗಳು | ಗರಿಷ್ಟ | ಜ್ಞಾನ | ಕೌಶಲ್ಯ/ ಅಭ್ಯಾಸ |
| **MES/ N 1401** (ಅಗತ್ಯಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಕೆಲಸದ ಹರಿವನ್ನು ಯೋಜಿಸುವುದು) | PC1. ನಿರ್ದೇಶಕರ ದೂರದೃಷ್ಟಿ, ಸೃಜನಶೀಲತೆ, ತಾಂತ್ರಿಕ ಅಗತ್ಯಗಳ ಜೊತೆಯಲ್ಲಿ ಕಾಲಮಿತಿ ಮತ್ತು ಅಂತಿಮ ಉತ್ಪನ್ನ(ಚಲನಚಿತ್ರ)ದ ಹೊರಪಡಿಕೆ ಕುರಿತು ನಿರೀಕ್ಷೆಗಳನ್ನು ಅರ್ಥಮಾಡಿಕೊಳ್ಳುವುದು. | 100 | 20 | 10 | 50 |
| | PC2. ಭಾವನೆಗಳ ಏರಿಳಿತ, ದೃಶ್ಯದ ವ್ಯಾಕರಣ, ಸ್ಫೂರ್ತಿದಾಯಕ ಅಂಶಗಳು ಹಾಗೂ ಪರಿವರ್ತನೆಯ ಅಗತ್ಯಗಳನ್ನೂ ಒಳಗೊಂಡಂತೆ ಕಥೆಯನ್ನು ಹೇಗೆ ಹೇಳಬೇಕೆಂಬುದನ್ನು ಅರ್ಥಮಾಡಿಕೊಳ್ಳುವುದು. | | 20 | 10 | |
| | PC3. ನಿರೀಕ್ಷಿತ ಫಲಿತಾಂಶವನ್ನು ಕೊಡಲು ಬೇಕಾದ ಮುಖ್ಯವಾದ ಉತ್ಪಾದನಾ ನಂತರದ ಪ್ರಕ್ರಿಯೆಗಳನ್ನು ಮುಂಚಿತವಾಗಿ ಗುರುತಿಸಿ ಅವುಗಳ ಜಾರಿಗೆ ಕೆಲಸದ ಹರಿವು ನಕ್ಷೆಯನ್ನು ಸಿದ್ಧಪಡಿಸುವುದು. (ಮೇಲ್ವಿಚಾರಕರು) | | 20 | 10 | |
| | PC4. ಕೆಲಸದ ಹರಿವನ್ನು ಚಿಕ್ಕ ಚಿಕ್ಕ ದೈನಂದಿನ ಚಟುವಟಿಕೆಗಳಾಗಿ ವಿಂಗಡಿಸಿಕೊಳ್ಳುವುದು | | 20 | 10 | |
| | PC5. ನಿರೀಕ್ಷಿತ ಫಲಿತಾಂಶವನ್ನು ಸಾಧಿಸಲು ಮಾಡಬೇಕಾದ ಪ್ರಕ್ರಿಯೆಗಳನ್ನು ಪೂರೈಸಲು ಅಗತ್ಯವಿರುವ ಶ್ರಮವನ್ನು ಮುನ್ನೆಣಿಕೆ ಮಾಡಿ, ಬಜೆಟ್ – ಕಾಲಮಿತಿ ಮತ್ತು ತಾಂತ್ರಿಕ ಮಿತಿಗಳ ಒಳಗೆ ಒಂದು ಕಾರ್ಯಯೋಜನೆಯನ್ನು ಮಾಡುವುದು. (ಮೇಲ್ವಿಚಾರಕರು) | | 20 | 10 | |
| | | ಒಟ್ಟು | **100** | **50** | **50** |
| **MES/ N 1402** (ಸಾಮಗ್ರಿಗಳು ಮತ್ತು ಉಪಕರಣಗಳ ನಿರ್ವಹಣೆ) | PC1. ಕಚ್ಚಾ ವಸ್ತುವನ್ನು/ ವೀಡಿಯೋಗಳನ್ನು ಒಟ್ಟು ಮಾಡಿ ಚಿತ್ರದ ಉತ್ಪಾದನೋತ್ತರ ಕೆಲಸಕ್ಕೆ ಬೇಕಿರುವಷ್ಟನ್ನು ಆರಿಸಿಕೊಳ್ಳುವುದು. | 100 | 40 | 20 | 50 |
| | PC2. ಕಚ್ಚಾ ವಸ್ತುವನ್ನು/ ವೀಡಿಯೋ ತುಣುಕುಗಳನ್ನು ಅರ್ಥೈಸಿಕೊಂಡು ಉತ್ಪಾದನೋತ್ತರ ಚಟುವಟಿಕೆಗೆ ಸಿದ್ಧತೆ ಮಾಡಿಕೊಳ್ಳುವುದು. | | 25 | 10 | |
| | PC3. ತಂತ್ರಾಂಶಗಳು ಬಳಕೆಗೆ ಸಿದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು. (ಉದಾ: ಫೈನಲ್ ಕಟ್ ಪ್ರೊ, ಎವಿಡ್, ಆಫ್ಟರ್ ಎಫೆಕ್ಟ್ ಮತ್ತು ಸೌಂಡ್ ಕ್ಲೀನಿಂಗ್ ತಂತ್ರಾಂಶಗಳು) | | 10 | 5 | 50 |
| | PC4. ಸೂಕ್ತ ಶೇಖರಣಾ ವಿಧಾನದಲ್ಲಿ ನಡುನಡುವೆ ಪರ್ಯಾಯ ಪ್ರತಿಗಳನ್ನು ಉಳಿಸಿ ಶೇಖರಿಸಿಡುವುದು. | | 10 | 5 | |

| | | | | | |
|---|---|---|---|---|---|
| | PC5. ಅಂತಿಮ ಉತ್ಪನ್ನ(ಚಲನಚಿತ್ರ)ವನ್ನು ಅಗತ್ಯವಿರುವ ನಮೂನೆಯಲ್ಲಿ (mp4, avi, wmv, mpg, mov... ಇತ್ಯಾದಿ) ಉಳಿಸುವುದು ಮತ್ತು ಅಗತ್ಯದ/ ಪ್ರದರ್ಶನಕ್ಕೆ ಬೇಕಿರುವ ಮಾಧ್ಯಮಕ್ಕೆ (DVD, ಟೇಪು, ಫ್ಲಿಲ್ಮ್, ಡಿಜಿಟಲ್ ಇತ್ಯಾದಿ) ವರ್ಗಾಯಿಸುವುದು | | 10 | 5 | |
| | PC6. ಹಿಂದಿನ ಬೇಡದ ದಾಖಲೆ/ ಮಾಹಿತಿ ಅಂಶಗಳನ್ನೆಲ್ಲಾ ತೆಗೆದು ಹಾಕಿ ತಂತ್ರಾಂಶವನ್ನು ಮುಂದಿನ ಯೋಜನೆಗೆ ಬಳಸಲು ಸಿದ್ಧಪಡಿಸಿಟ್ಟುಕೊಳ್ಳುವುದು. | | 5 | 5 | |
| | | **ಒಟ್ಟು** | **100** | **40** | **50** |
| **MES/ N 1403** **(ಉತ್ಪನ್ನಗಳ ಸಂಕಲನ)** | PC1. ಕಥೆಯ ಹರಿವನ್ನು ಊಹಿಸಿ, ಸಾಧ್ಯತೆಗಳನ್ನು ಕಲ್ಪಿಸಿಕೊಳ್ಳುವುದು. | 100 | 25 | 10 | 50 |
| | PC2. ಅಗತ್ಯವಾದ ಕಥಾಹರಿವನ್ನು ಕಟ್ಟಿಕೊಡಲು ಬೇಕಾದ ತುಣುಕುಗಳು, ಧ್ವನಿ, ಸಂಗೀತ, ಸಂಭಾಷಣೆ ಗ್ರಾಫಿಕ್ಸ್ ಹಾಗೂ ವಿಶೇಷ ಪರಿಣಾಮಗಳನ್ನು ಮುಂದಾಗಿಯೇ ಮೌಲ್ಯಮಾಪನ ಮಾಡಿ ಸಿದ್ಧಪಡಿಸಿಟ್ಟುಕೊಳ್ಳುವುದು. | | 20 | 10 | |
| | PC3. ವೀಡಿಯೋ, ಚಿತ್ರಗಳು ಮತ್ತು ಧ್ವನಿಗಳ ಸಂಗ್ರಹದ ಆಸ್ತಿಯನ್ನು ಜೋಪಾನವಾಗಿ ನಿರ್ವಹಿಸುವುದು | | 20 | 10 | |
| | PC4. ಡಿಜಿಜಲ್ ಸಾಫ್ಟ್‌ವೇರ್ ಬಳಸಿ ದೃಶ್ಯಗಳನ್ನು ಕತ್ತರಿಸಿ, ಜೋಡಿಸಿ, ನಿರೀಕ್ಷಿತ ಗುಣಮಟ್ಟಕ್ಕೆ ಹೊಂದಿಸಿ (ಲಯ, ನಿರ್ದೇಶನ, ಶೈಲಿ, ಭಾವ, ಪರಿಣಾಮ ಇತ್ಯಾದಿ) ನಿರ್ದಿಷ್ಟ ಪ್ರೇಕ್ಷಕರನ್ನು ತಲುಪುವಂತೆ ಇರಲಿ. | | 15 | 10 | |
| | PC5. ರಫ್ ಕಟ್ ಸಿದ್ಧಪಡಿಸಿ, ಅಂತಿಮ ತಯಾರಿಯ ಗುಣಮಟ್ಟಗಳಿಗೆ ಅನುಗುಣವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ | | 10 | 5 | |
| | PC6. ಅಂತಿಮ ಉತ್ಪನ್ನದಲ್ಲಿ ನಿರಂತರತೆ, ಸುಲಲಿತ ಹರಿವು/ ಪರಸ್ಪರ ಸಂಬಂಧಗಳು ಇರುವುದನ್ನು ಖಚಿತಪಡಿಸಿಕೊಳ್ಳಿ. | | 10 | 5 | |
| | | **ಒಟ್ಟು** | **100** | **50** | **50** |
| **MES/ N 1404** **(ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಯನ್ನು ಕಾಪಾಡಿ ಕೊಳ್ಳುವುದು)** | PC1. ಸಂಸ್ಥೆಯ ಪ್ರಸ್ತುತ ಆರೋಗ್ಯ, ಸುರಕ್ಷತೆ ಹಾಗೂ ಭದ್ರತಾ ನಿಯಮಗಳನ್ನು ಅರ್ಥ ಮಾಡಿಕೊಂಡು ಅದಕ್ಕೆ ಬದ್ಧರಾಗಿ ನಡೆಯುವುದು | 100 | 10 | 5 | **50** |
| | PC2. ನಿಮ್ಮ ಕಾರ್ಯಚಟುವಟಿಕೆಗೆ ಸಂಬಂಧಪಟ್ಟ ಎಲ್ಲಾ ಸುರಕ್ಷತಾ ಕಾರ್ಯವಿಧಾನಗಳನ್ನು ಅರ್ಥಮಾಡಿಕೊಳ್ಳುವುದು | | 10 | 5 | |
| | PC3. ಅನಾರೋಗ್ಯ, ಅಪಘಾತಗಳು, ಬೆಂಕಿ ಆಕಸ್ಮಿಕ ಮೊದಲಾದ ಸಂದರ್ಭಗಳಲ್ಲಿ ಸ್ಥಳಾಂತರವನ್ನು ಬೇಡುವ ಮತ್ತು ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರವು ರೂಪಿಸಿರುವ ನೀತಿ ನಿಯಮಗಳನ್ನು ಅರ್ಥ ಮಾಡಿಕೊಳ್ಳುವುದು | | 5 | 3 | |
| | PC4. ಆರೋಗ್ಯ ಮತ್ತು ಸುರಕ್ಷತೆ ವಿಚಾರವಾಗಿ ಸಂಸ್ಥೆಯು ನಡೆಸುವ ತಿಳುವಳಿಕೆ ಕಾರ್ಯಕ್ರಮ ಮತ್ತು ಅಣಕುಗಳಲ್ಲಿ ಪಾಲುಗೊಳ್ಳಿ. | | 5 | 2 | |
| | PC5. ಸ್ಥಳದ ಸುರಕ್ಷತೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಹೊಣೆಗಾರಿಕೆಯ ಮತ್ತು ತುರ್ತು ಸಂದರ್ಭದಲ್ಲಿ ಸಂಪರ್ಕಿಸ ಬೇಕಾದ ವ್ಯಕ್ತಿಗಳನ್ನು ಗುರುತಿಸಿ | | 10 | 5 | |
| | PC6. ಸುರಕ್ಷತಾ ಸಂಜ್ಞೆಗಳನ್ನು ಗುರುತಿಸಿ. ಉದಾ: ಅಗ್ನಿ ಅಲಾರ್ಮ್, ಮೆಟ್ಟಿಲುಗಳು, ಅಗ್ನಿಶಾಮಕ ಸ್ಥಳ, ಪ್ರಥಮ ಚಿಕಿತ್ಸೆ ಮತ್ತು ಚಿಕಿತ್ಸಾ ಕೊಠಡಿಗಳು | | 10 | 5 | |
| | PC7. ನಿಮ್ಮ ಕೆಲಸದ ಸ್ಥಳದಲ್ಲಿ ಆರೋಗ್ಯ ಮತ್ತು ಸುರಕ್ಷತೆಗೆ ಕಂಟಕ ಉಂಟು ಮಾಡಬಲ್ಲ ವಿಚಾರಗಳನ್ನು ಗಮನಿಸಿ | | 10 | 5 | |
| | PC8. ಸೂಕ್ತ ಮುನ್ನೆಚ್ಚರಿಕೆ ಕ್ರಮಗಳ ನೆರವಿನಿಂದ ನಿಮ್ಮ ಕೆಲಸದ ಸ್ಥಳದಲ್ಲಿ ನಿಮ್ಮ ಮತ್ತು ಇತರರ ಸುರಕ್ಷತೆಯನ್ನು ಖಾತ್ರಿಪಡಿಸಿಕೊಳ್ಳಿ | | 10 | 5 | |
| | ಕಅ9. ಆರೋಗ್ಯ, ಸುರಕ್ಷತೆ ಮತ್ತು ಭದ್ರತೆಗೆ ಸಂಬಂಧಿಸಿದಂತೆ ಸುಧಾರಣೆಗಳನ್ನು ತರುವ ಬಗ್ಗೆ ನಿಗದಿತ ವ್ಯಕ್ತಿಗೆ ಶಿಫಾರಸು ಮಾಡುವ ಅವಶ್ಯಕತೆ ಮತ್ತು ಸಂದರ್ಭವನ್ನು ಗುರುತಿಸಿ | | 5 | 3 | |
| | ಕಅ10. ನಿಮ್ಮ ಕೆಲಸದ ವ್ಯಾಪ್ತಿಯ ಹೊರಗೆ ಯಾವುದಾದರೂ ಅಪಾಯಕಾರಿ ಸನ್ನಿವೇಶಗಳು ಕಂಡುಬಂದರೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತನ್ನು ಮತ್ತು ಆ ಸ್ಥಳದಲ್ಲಿನ ಇನ್ನಿತರನ್ನು ಜಾಗೃತಗೊಳಿಸಿ. | | 10 | 5 | |
| | ಕಅ11. ಅನಾರೋಗ್ಯ, ಬೆಂಕಿ ಅಪಘಾತಗಳು ಹಾಗೂ ಇನ್ನಿತರ ನೈಸರ್ಗಿಕ ವಿಕೋಪಗಳ ಸಂದರ್ಭಗಳಲ್ಲಿ ಸಂಸ್ಥೆಯು ಗೊತ್ತುಮಾಡಿದ ತುರ್ತು ಸಂದರ್ಭದ ಕಾರ್ಯವಿಧಾನಗಳನ್ನು ಪಾಲಿಸಿ. | | 10 | 5 | |
| | ಕಅ12. ನಿಮ್ಮ ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಅನಾರೋಗ್ಯ, ಅಪಘಾತ, ಬೆಂಕಿ ಆಕಸ್ಮಿಕ ಮೊದಲಾದ ಸಂಭವನೀಯ ಅಪಾಯಗಳನ್ನು ಗುರುತಿಸಿ, ಸೂಕ್ತ ಮುನ್ನೆಚ್ಚರಿಕೆ ಕ್ರಮಗಳ ಮೂಲಕ ನಿವಾರಿಸಿ | | 5 | 2 | |
| | | **ಒಟ್ಟು** | **100** | **50** | **50** |

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ
KARNATAKA SKILL DEVELOPMENT CORPORATION

SANKALP
Ministry of Skill Development
& Entrepreneurship